ವಿದ್ವಾನ್ ಲಕ್ಷ್ಮೀನಾರಾಯಣಾಚಾರ್ಯ ವಿರಚಿತಾ

ಅಮೃತಾಧಿರೋಹಿಣೀ

ಭಗವದ್ರಾಮಾನುಜಾಚಾರ್ಯರು

ಮೇಲುಕೋಟೆ

ಾರ, ಸಾಹಿತ್ಯ ರತ್ನ, ಸಂಸ್ಕೃತ ಸೇವಾಸಕ್ತ, ಕವಿಕುಲ
ಜಗ್ಗೂವಕುಳಭೂಷಣ ಮಹಾಕವಿ
(1902-1994)

॥ ಶ್ರೀ ಃ ॥

ಶ್ರೀಮತೇ ರಾಮಾನುಜಾಯ ನಮಃ

ಶ್ರೀ ಯದುಶೈಲವಾಸಿ ಬಾಲಧನ್ವಿ
ಜಗ್ಗೂವಕುಲ ಭೂಷಣ
ವಿರಚಿತಾ

ಅಮೃತಾಧಿರೋಹಿಣೀ

ನಾಮ

ಭಗವದ್ರಾಮಾನುಜ ಸ್ತೋತ್ರಂ

ಮೊದಲನೆಯ ಮುದ್ರಣ : 1971
ದ್ವಿತೀಯ ಮುದ್ರಣ : 2010

ಇದರ ಎಲ್ಲ ಹಕ್ಕುಗಳು ಲೇಖಕರ ಮಕ್ಕಳಿಗೆ ಸೇರಿವೆ

ಮುದ್ರಣ :
ಸರ್ವಮಂಗಳ ಪ್ರಿಂಟರ್ಸ್
ನಂ. 8, ಮಲ್ಲೇಶ್ವರ 8ನೇ ಅಡ್ಡರಸ್ತೆ
ಬೆಂಗಳೂರು–560 003
ದೂರವಾಣಿ : 23194580, 23573948

॥ ಶ್ರೀಃ ॥

ಶುಭಮಸ್ತು

ಶ್ರೀಮತೇ ರಾಮಾನುಜಾಯ ನಮಃ

ವಿಜ್ಞಾಪನೆ

ಈ ಲೋಕದಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ವಿಧ ಪುರುಷಾರ್ಥಗಳಲ್ಲಿ ಕೆಲವರು ಧರ್ಮವನ್ನೂ, ಮತ್ತೆ ಕೆಲವರು ಅರ್ಥವನ್ನೂ ಕಾಮವನ್ನೂ ಅಪೇಕ್ಷಿಸುವರು. ಆದರೆ, ಈ ಮೂರು ಪುರುಷಾರ್ಥಗಳೂ ಅವರವರ ಕರ್ಮಾನುಗುಣವಾಗಿ ಅವರವರಿಗೆ ಉಂಟಾಗುವುವು. ಮೋಕ್ಷವೆಂಬ ಪುರುಷಾರ್ಥವೋ ಅಂದರೆ, ಸದಾಚಾರ್ಯನ ಅನುಗ್ರಹದಿಂದ ಲಭಿಸಬೇಕೇ ಹೊರತು, ಬೇರೇ ಯಾವ ಉಪಾಯಗಳಿಂದಲೂ ಲಭಿಸುವುದಿಲ್ಲ. ಆದ್ದರಿಂದಲೇ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸುವ ಸದಾಚಾರ್ಯರಾದ ಭಗವದ್ರಾಮಾನುಜಾಚಾರ್ಯರ ವಿಷಯಕವಾದ ಈ 'ಅಮೃತಾಧಿರೋಹಿಣೀ' ಎಂಬ ಸ್ತೋತ್ರವನ್ನು ಭಗವದ್ರಾಮಾನುಜಾಚಾರ್ಯರ ಪ್ರೇರಣೆಯಿಂದಲೇ ರಚಿಸಿ, ಅವರ ಪಾದಾರವಿಂದಕ್ಕೆ ಸಮರ್ಪಣೆ ಮಾಡಿರುವೆನು. ಈ ಸ್ತೋತ್ರವನ್ನು ಆಚಾರ್ಯಪ್ರತಿಪತ್ತಿಯಿಂದ ಪಠಿಸಿ ಎಲ್ಲರೂ ಯತಿಕುಲಪತಿಯಾದ ಶ್ರೀಮದ್ಭಗವದ್ಭಾಷ್ಯಕಾರರ ಕೃಪಾನುಗ್ರಹಕ್ಕೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಆಚಾರ್ಯ ಪ್ರತಿಪತ್ತಿಯುಳ್ಳ ಶ್ರೀಮಾನ್ ಎಸ್.ಎಸ್. ಶರ್ಮಾರವರು ಈ ಸ್ತೋತ್ರವನ್ನು ಎಲ್ಲರೂ ಪಠಿಸಿ ಆನಂದಿಸಬೇಕೆಂದು ಆಶೆಯಿಂದ, ಇದರ ಮುದ್ರಣಕ್ಕೆ ದ್ರವ್ಯ ಸಹಾಯ ಮಾಡಿ ಪ್ರಕಾಶಪಡಿಸಿರುವರು.

ಈ ರೀತಿ ರಾಮಾನುಜಾಚಾರ್ಯರಲ್ಲಿ ಭಕ್ತಿಯುಳ್ಳವರಾಗಿಯೂ, ಸತ್ಕಾರ್ಯದಲ್ಲಿ ಶ್ರದ್ಧೆಯುಳ್ಳವರಾಗಿಯೂ, ಉದಾರಿಯಾಗಿಯೂ ಇರುವ ಎಸ್.ಎಸ್. ಶರ್ಮಾರವರಿಗೆ ಅನೇಕಾನೇಕ ಧನ್ಯವಾದಗಳನ್ನು ಅರ್ಪಿಸುವೆನು.

ಇತಿ ಸಜ್ಜನವಿಧೇಯಃ
ಜಗ್ಗೂವಕುಲಭೂಷಣಃ

ದ್ವಿತೀಯ ಮುದ್ರಣಾಂಗವಾಗಿ ವಿಜ್ಞಾಪನೆ

ನಮ್ಮ ತೀರ್ಥರೂಪರಾದ ಶ್ರೀಮಾನ್ ಬಾಲಧನ್ವಿ ಜಗ್ಗೂವಕುಳಭೂಷಣ ಮಹಾಕವಿಯ "ಅಮೃತಾಧಿರೋಹಿಣೀ" ಸ್ತೋತ್ರವನ್ನು ಶ್ರೀ ರಾಮಾನುಜಭಕ್ತ ಮಹನೀಯರ ಸಮ್ಮುಖಕ್ಕೆ ದ್ವಿತೀಯ ಮುದ್ರಣವಾಗಿ ಅರ್ಪಿಸುವುದು ನಮ್ಮ ಮಹಾಭಾಗ್ಯ.

ಮಹಾಕವಿ ವಕುಳ ಭೂಷಣರ ಪ್ರತಿ ಗ್ರಂಥಗಳಲ್ಲೂ, ಸ್ತೋತ್ರಗಳಲ್ಲೂ ಅವರ ಅಪಾರವಾದ ಭಗವದ್ಭಕ್ತಿಯೂ ನೈಚ್ಯಾನುಸಂಧಾನವೂ ಎತ್ತಿ ತೋರುತ್ತವೆ. 'ಅಮೃತಾಧಿರೋಹಿಣೀ' ಸ್ತೋತ್ರವು ಅವರು ಆಚಾರ್ಯ ರಾಮಾನುಜರಲ್ಲಿ ಇಟ್ಟಿರುವ ಭಕ್ತಿಯನ್ನು ಪ್ರತಿಪಾದಿಸುತ್ತದೆ.

ಒಂದು ಸದ್ವಂಶದಲ್ಲಿ ಜನ್ಮ ಪಡೆಯುವುದು ಮಹಾ ದುರ್ಲಭ. ಜಗ್ಗೂವಕುಳ ಭೂಷಣ ಹಾಗೂ ಶ್ರೀಮತಿ ಎಗ್ಗಮ್ಮ ಇವರ ಮಕ್ಕಳಾಗಿ ನಮಗೆ ಜನ್ಮ ಲಭಿಸಿದ್ದಕ್ಕಾಗಿ ನಾವು ಆ ಭಗವಂತನಿಗೂ ಭಗವದ್ರಾಮಾನುಜಾಚಾರ್ಯರಿಗೂ ಚಿರ ಋಣಿಗಳು.

'ಅಮೃತಾಧಿರೋಹಿಣೀ' ಸ್ತೋತ್ರವನ್ನು ಭಕ್ತಮಹಾಶಯರು ಸ್ವೀಕರಿಸಿ ಶ್ರೀರಾಮಾನುಜಾಚಾರ್ಯರ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ನಾವು ಪ್ರಾರ್ಥಿಸುತ್ತೇವೆ.

ಇತಿ ಭಕ್ತ ಜನವಿಧೇಯರು
ಜಗ್ಗೂರಾಮಸುದರ್ಶನ್
ಜಗ್ಗೂ ಶ್ರೀನಿವಾಸನ್
ಜಗ್ಗೂ ನರಸಿಂಹನ್

श्रीः

॥ शुभमस्तु ॥

श्रीमते रामानुजाय नमः

अमृताधिरोहिणी

स जयति यतिकुलकेतुः
संसृति सागर विलङ्घने सेतुः
हरिपद सेवा हेतुः
मच्चस्सवितानको रमानेतुः ॥१॥

विनिन्द्याचारोऽहं दुरितनिलयो लक्ष्मणमुने
समर्थस्स्तोतुं त्वां कथमिव भवेयं गुणनिधिम्।
तथाप्यस्ताशङ्कस्त्वयि कृतभरस्सतौमि नितरां
कृपां स्मारंस्मारं तव रहसि म्के प्रकटिताम् ॥२॥

मुकुन्दांघ्रिद्वन्द्वप्रणयिनमनल्पोज्वलतनुं
विभूत्योर्नेतारं तरणिमुरुसंसार जलधेः।
दयाम्भोधिं मोक्षप्रदमखिललोकैकशरणं
गुरुं वन्दे नित्यं रुचिरचरणं लक्ष्मणमुनिम् ॥३॥

अहं याचे दीनो यतिवर हृतापत्समुदय
स्मरज्वालालीढे सततततरले दुःखबहुले ।
अनेकाशाबद्धे मम हृदि मनोज्ञं मृदुतरं
पदाम्भोजं कृत्वा परिहर महातापमधुना ॥४॥

जनेः प्रागेवान्नं विधिकृतमिति प्राज्ञफणितिं
मुहुश्श्रुत्वाप्येनं प्रतिकलमहो जीवनकृते।
त्वतीयाङ्घ्री त्यक्त्वा कुपतिपदसेवाकुतुकिनं
कटाक्षैः पापं मां प्रयतमधुना लक्ष्मण कुरु ॥५॥

दयाम्भोधे रामावरज मम कर्मानुगुणकां
जनिं शश्वन्मह्यं विधिरपि ददातु क्वचिदपि ।
सुखं दुःखं वा स्यात्तदनुगुणकं किन्तु सततं
त्वदीयांघ्रिध्यानं प्रतिजनि भवत्वस्य हृदि मे ॥६॥

परस्त्रीसंसक्तं नयनयुगलं गानकुतुकं
श्रुतिद्वन्द्वं दानग्रहणनिपुणं पाणियुगलम्।
परस्तोत्रासक्तं वदनमखिलं मेऽस्य करणं
कदावा त्वत्सेवामतुलविभवां वक्ष्यति मुने ॥७॥

अनात्मन्यात्मत्वं तरलजगति स्थैर्यंघिषणा
सुखत्वं दुःखेऽसृक्पिशितविसरे वर्ण्मणि रुचिः
भवाब्धे राकायां सततमपि नार्यामभिरुचिः
प्रसादाभावात्ते यतिवर ममैवं प्रभवति ॥८॥

रसैष्षड्भिस्सम्यग्यतिकुलपते पोषितमिदं
शरीरं चित्तं तु स्मरपरवशं चञ्चलमपि।
अतस्स्थित्वैकत्र त्वदरुणपदं ध्यातुमलसो
यथालर्को धावाम्यखिलपुरवर्त्मस्वहमपि ॥९॥

अनिर्वाच्यं योनेर्जननसमये यच्च परुषं
समुद्भूतं दुःखं शठपवनसञ्चोदिततया।
प्रयाणे प्राणानां यदपरिमितं दुःखमचिरा-
द्दयाब्दे तत्सर्वं परिहर ममैतस्य यतिराट् ॥१०॥

न बन्धु र्नो मित्रं न सुतनिवहो नापि गृहिणी
न माता नो तातः प्रभवति तदा लक्ष्मणमुने ।
यदा कर्षन्त्येनं यमभटगणाः पाशनिकरैः
दयासिन्धो बन्धो तव चरण एवैकशरणम् ॥११॥

मुहुर्याचे स्वामिन्जनक जननी सूनु गृहिणी -
सुहृद्बन्धुष्वेवं भवनवसन द्रव्यनिवहे ।
अनन्ता या प्रीतिः प्रभवति सदा मह्यामिह ता -
मनन्तात्मन्प्रीतिं तव चरणयो र्देहि कृपया ॥१२॥

न शक्यं मत्पापं क्षणविरचितं वक्तुमपि य
द्विधात्रा शेषेणाप्यखिलवदनैर्वत्सरशतम्।
मुहुस्तादृक्पापं यतिवर नृशंसो विरचय-
न्दुरात्मा निर्लज्जस्तव धुरि चरेयं गतभयः ॥१३॥

मनोज्ञे वैकुन्ठे सततमपि शेषत्वविभवं
प्रदर्श्य श्रीनेतु स्सकलपरिचर्यां विरचयन्।
वयं विष्णोश्शेषा इति भुविच शेषत्वधिषणा-
मकार्षीर्मर्त्यानां वत तव कृपा लक्ष्मणमुने ॥१४॥

शतेप्यायुष्वर्धं स्वपनसमयेष्वेव गलितं
शिशुत्वे तारुण्ये परुषजरठत्वे तदनुगैः।
रसैर्नष्टं शिष्टं भवति सततं लक्ष्मणमुने
त्वादीयाङ्घ्रिध्यानं क्षणमपि मया हन्त न कृतम् ॥१५॥

विहाय त्वत्सेवां यतिकुलपते मार्गणकृते
मृगाक्षीणां हेयक्षणिक सुखदानाञ्च तृषया।
स्वयूधात्त्रस्ताया भयचलहरिण्या नयनव-
त्सुदूरं चित्तं मे तरलतरलं धावति सदा ॥१६॥

स्वकर्माख्यं बीजं जगति बहुशस्सञ्चितमसौ
चिरादुप्त्वा क्षेत्रे तदनुगुण माविष्कृतमिह।
फलं भुञ्जानस्सन्कृषिक इव तल्लक्ष्मणमुने
प्रसादाभावात्ते गलितहरिभक्तिर्विचरति ॥१७॥

सुखाभासक्षौद्रं विषयमधुकोशं चपलधीः
चिचिन्वन्जीवोयं मुहुरपि तदास्वादनरतः।
भवारण्ये तापत्रयविविधहिंस्त्रैकनिलये
भ्रमन्क्लिष्टस्स्वामिन्स्वतद इह ते पादविमुखः ॥१८॥

बहिर्ध्वान्तं भास्वान्भुवि विसृमरं विष्णुपदगो
निरस्यत्यातन्वन्नयनविषयान्दृश्यनिवहान्।
चिराद्रूढं गाढं यतिवररविस्त्वान्तरमसौ
निरस्यन्ब्रह्माण्डात्प्रकटयति वाह्यांश्च विषयम् ॥१९॥

विचित्रा मायायाः प्रबलतरता लक्ष्णमुने
त्रयीं व्याकुर्वाणै रस्मृतिमुखपुराणैः प्रकटिते।
कथञ्चित्सन्मार्गे जिगमिषुममुं मामघपथे
नियुङ्क्ते सा यस्मा च्छरणमिह तत्ते पदयुगम् ॥२०॥

कथंवा कर्त्री स्यात्प्रकृतिरिह चैतन्यविकला
पुमान्ज्ञानं पद्मच्छद इव विलेपो यतिवर।
प्रतिच्छायाःबुद्धि प्रचुर सुखदुःखाद्यनुभवः
कथं स्यादित्येषा भवति कृपया ते नृषु मतिः ॥२१॥

भविष्यन्नाचार्यो यतिरिति शठरेस्समभव –
द्दयायाः यः पात्रं भववन कुठारोयमिति यः।
कटाक्षस्याप्यासीत्प्रथितयशसो यामुनमुनेः
स भूयान्मे श्रीमान्शरणमिह रामानुजमुनिः ॥२२॥

श्रुतीनां सर्वासामपि सरससार्थक्यकथनैः
विशिष्टाद्वैतं तन्मतमिति भुवि ख्यापितवतः
जगद्वयाप्तं मोहं यतिकुलपतेः क्षालितवतः
पदाम्भोजद्वन्द्वं ममच हरतु द्वन्द्वमचिरात् ॥२३॥

प्रकृत्या जीवोऽयं परिवृततया ध्वस्तविभवो
भवध्वान्ते मग्नः प्रकृतिपरिणामांस्तु विषयान्।
स्वभोग्यान्मन्वान स्स्मरति न च नारायणपदं
कथं मुक्तोयं स्यात्त्वदमितकृपां लक्ष्मण विना ॥२४॥

तपस्तप्तं तीव्रं न दृढंनियमो नैव रचितः
मया दिव्यक्षेत्राद्यटनमपि नैवाभिलषितम्।
न च स्नातं तीर्थेष्वमितदुरितक्षालनकृते
भवत्पादद्वन्द्वे विनिहितभरेणार्यविनुत ॥२५॥

हरेर्या माया चिद्रणममित मावृत्य नितरां
चिरात्संसाराग्नावपरिमिततापे ग्लपयति ।
स्मरन्तं त्वत्पादावपसरति सामास्य पुरुषं
विचित्रस्ते रामावरज महिमा वागतिगतः ॥२६॥

न मे भक्तिर्लक्ष्मीसहचरपदाब्जे ट्टढतरा
न च क्षान्तिस्स्वान्ते द्रविणगण सम्पादनरते।
न विश्वासस्स्वामिन्हरिगुणरते भक्तनिवहे
समुत्श्चेवेत्पापः कथमिव कटाक्षं तव विना ॥२७॥

विभूतिर्लीलाख्या कमितुरपि दुग्धाब्धिदुहितुः
प्रवृद्धा मादृक्षै र्दुरितनिलयैर्जन्तुनिकरैः ।
त्वयि प्रादुर्भूते यतिवर कृशेयं प्रतिदिनं
विभूतिर्नित्याख्या त्वभवदतिपुष्टा गुणनिधे ॥२८॥

लभेयाहं कश्चित्कचिदपि कदा ज्ञानिनमिति
प्रयत्नात्सर्वज्ञः करणतनुभिश्छिद्रणममुं।
मुकुंदस्संयोज्याप्यनधिगतवानेकमपि तं
बहून्स्तस्याकार्षीस्सपदि सुलभान्हन्त महिमा ॥२९॥

सुवर्णं चिद्रूपं प्रकृतिखनिकिट्टावृततया
स्वतस्तेजिष्ठंचाप्यविमलमिदं लक्ष्मणमुने ।
कदावा कारुण्यात्ते फलमतिमपास्यात्र रचिते
विशुद्धं कर्माग्नौ हरिपदविभूषा च भविता ॥३०॥

कुरुक्षेत्रे साक्षाद्दितिजरिपुणा साधु गदिता
मुधा जाता गीताह्यकृत नरमोहापहरणा।
अहो सैव श्रीमद्यतिवर महाभाष्यसुभगा
जगत्सेव्याप्यासीत्सकलनरमोहापरहणात् ॥३१॥

स्वतंत्रं श्रीरामं भरत इव नारायणमपि
प्रपद्यालब्ध्वा स्यात्फलमिह पुमान्क्लेशविषयः।
यतीन्द्रस्य श्रीमच्चरणयुगलीं रक्षकतया
प्रपन्नो वैकुण्ठे हरिचरणसेवां वितनुते ॥३१॥

निजस्थानं गच्छन्रघुकुलपतिः प्राणिनिकरा -
ननैषीद्वासादीन्निजपुरगतानेव न परान्।
यतीन्द्र त्वत्पादाश्रित जनपदाब्जाश्रयवतो
प्यहो मोक्षं नित्यं नयसि सकलांस्तेतु महिमा ॥३३॥

न कस्याप्यन्यस्य प्रथितविभवं मंत्रमतुलं
प्रवक्ष्यामीत्येवं रचितशपथो मासमनदन्।
गुरोर्गोष्ठीपूर्णास्तुचिरमुररीकृत्य नगरे
तमुच्चैस्सर्वेषां धुरि जगदिथाहो तव कृपा ॥३४॥

कृतानन्ताघोऽहं धुतभवभयोस्मद्य नितरां
लभेयाहं श्रीमद्धरिचरण सेवाञ्च सततम्।
मदीयोऽयं दीनो जन इति यतो लक्ष्मणमुने
भवानंगीचक्रे परमकृपया दुष्टमपि माम् ॥३५॥

यतीन्द्रेदं चित्रं फलमतिमपास्यात्र विधितः
चतुर्भेदान्योगान्सुचिरमनुतिष्ठन्नपि नरः
मुरारेः कारुण्याद्यदनुभवति ध्वस्तदुरितः
त्वदियास्त्वक्लेशं तव हि कृषितस्तत्खलु फलम् ॥३६॥

कृते दुष्कर्मण्यप्यहह मम रामानुजमुने
न पश्चात्तापोभूद्वत न विरतो दुष्टचरितात्।
सकृत्त्वत्पादाब्ज द्वयमननमप्यन्यमनसा
प्यनासन्त्या वा यत्कृतमपि तदुत्तारयतु माम् ॥३७॥

गुणैस्तैश्शान्त्याद्यैर्विरहितमना अप्यहमहो
भवद्भक्ताकल्पैर्नट इव वशीकृत्य जनताम्।
सदास्मि द्रव्यार्थी कुटिलहृदयो लक्ष्मणमुने
भवत्पादच्छाया शरणमिह नान्या मम गतिः ॥३८॥

मन्दस्मितोज्वलकपोलतलोद्गतान्त -
गाम्भीर्यसिन्धुपृषतं कमलायताक्षम्।
श्वेतोर्ध्वपुण्ड्रहृत भक्त भवज्वरं मे
चक्षुष्पथे यतिपतेर्मुखमाविरस्तु ॥३९॥

चिदचित्तत्वे सत्ये
श्रीमान्नारयणोपि तच्छेषी।
प्रख्यापयन्निवेत्थं
जयति स दण्डत्रयेण यतिराजः ॥४०॥

संसारदावानल दह्यमाना -
न्मर्त्याननुक्रोशसुधाप्रवषैः
आप्याययत्यश्रितवत्सलो यः
तस्मै सदा मङ्गलमाविरस्तु ॥४१॥

यद्दिव्यपाद सरसीरुहमाकलय्य
चित्ते त्यजन्ति च भयङ्कररौरवादीन्।
मर्त्याः प्रमोद मतिवाग्विभवं लभन्ते
तस्मै यतीन्द्रगुरवे शुभमस्तु तुम्यम् ॥४२॥

येन वैकुण्ठसमतामवाप यदुभूधरः ।
तस्मै शेषावताराय यतिराजाय मङ्गलम् ॥४३॥

यस्मिन्नवाप शिष्यत्वं श्रीनिवासो जगद्गुरौ ।
रामप्रियोपि पुत्रत्वं तस्मै स्यान्नित्यमङ्गलम् ॥४४॥

यत्कूरनाथ मुख शिष्यगणाश्रितं य -
द्राजात्मजागतपिशाचविमोचकंच ।
यन्न्यासमात्रसुपवित्रितदक्षिणाशं
तस्मै यतेः पदयुगाय सदास्तु भद्रम् ॥४५॥

यः पठति प्रतिदिनम-
प्यमृताधिरोहिणीमेनाम् ।
अधिरोहति सतु धीमा
त्रामानुजांघ्रिभक्तिसोपानम् ॥४६॥

रामानुजाङ्घ्रिप्रवणो जग्गूवकुलभूषणः ।
तदङ्घ्रिपंकजे भक्त्या न्यधादेनां स्तवस्रजम् ॥४७॥

इति श्री बालधन्विजग्गूवकुलभूषण
प्रणीता
अमृताधिरोहिणी
समाप्ता
शं

श्रीः

॥शुभमस्तु॥

श्रीमते रामानुजाय नमः

प्रपन्नवाणी

शान्त्यादिगुणसम्पूर्णं यतिराट्पादुकात्मकम्।
ज्ञानवैराग्यगम्भीरं वन्दे दाशरथिं गुरुम् ॥१॥

त्वत्कृपासिन्धुमग्नस्य मम नाथ जगत्पते।
का भीतिर्भवपाथोधेः पाणिमुद्धृत्य रक्षसि ॥२॥

सुधांशुकरशीतेन कटाक्षेण सदा हरे।
सिञ्च मां भवकान्तारे पर्यटन्तं श्रियःपते ॥३॥

वेदाध्ययनसक्तोऽहं नैव कर्मरतोनच ।
तपोनिष्ठश्च नैवाहं त्वत्कृपामात्रभाजनं ॥४॥

त्वत्कृपा मयि न स्याच्चेन्मनुष्यत्वं कथं भवेत्।
तत्रापि विप्रभावश्च सत्कुलीनत्वमप्यहो ॥५॥

सदा कुक्षिम्भरेरत्र शिशुवत्पशुवच्च हा।
कुतो ज्ञानं कुतो भक्तिः मम नाथ भवत्पदे ॥६॥

न स्याच्चेत्त्वत्कृपा नाथ मत्कर्मज्ञानभक्तयः
नैव स्युःकार्यकारिण्य स्त्वयि न्यस्तभरोस्म्यतः ॥७॥

विशाले भवपाथोधौ मीनकल्पश्चलाचलः।
चरन्नान्यमितो भोग्यं लोकं जानामि माधव ॥८॥

जातस्य हि ध्रुवोमृत्युरिति ज्ञात्वाप्यहंतया।
बलवान्प्रेमबन्धो मे शरीरेस्मिन्बताच्युत ॥९॥

अथवा यक्तमेवास्मिन्शरीरे प्रेमबन्धनम्।
त्वन्नाम कीर्तनध्यानमननास्पदमत्रयत् ॥१०॥

पापकृन्नरकं याति पुण्यकृत्स्वर्गवैभवम्
उभयत्र भवन्नाम कीर्तनावसरो नहि ॥११॥

वैराग्यवर्षि वाग्मित्वं जिह्वायांपरिजृम्भते
कृत्यतो लेशमात्रन्तु नास्ति नारायणात्मनि ॥१२॥

कामः कामं वशीकृत्य प्रपीडयति मां हरे।
कृत्याकृत्यविवेकान्धं तनोति क्रोधराक्षसः ॥१३॥

लौभ्यात्तव सपर्यायै नहि काकणिकामपि
ददामि दानविषये का कथा कामितार्थद ॥१४॥

मोहाच्छास्त्रनिषिद्धं यत्कर्म तत्सततं हरे।
करोमि निस्त्रपस्सत्सु ब्रह्मनिष्ठ इति ब्रुवे ॥१५॥

रूपवान्सत्कुलीनोहं विद्वानिति मतिभ्रमात्।
मदमत्तमनस्कोहं न्यक्करोमि गुरूनपि ॥१६॥

मात्सर्येण कृशस्वान्तो भवद्दत्तामपि श्रियम्।
नैवेहानुभवाम्यज्ञ श्चित्ते सन्तोषवर्जितः ॥१७॥

स्वार्थसाधन निष्ठोस्मि दयादाक्षिण्यवर्जितः।
पापीयांसममुं श्रीश कथंवोद्धरसे प्रभो ॥२८॥

आशापाशनिबद्धात्मा विषयेषु निमग्नधीः॥
इन्द्रियग्रामनिघ्नोहं कथं स्यां त्वयि भक्तिभाक् ॥१९॥

मायाजालं प्रसार्यात्र विवशीकुरुषे नरान्
न तन्ममात्र दोषोस्ति त्वदधीनं जगत्रयम् ॥२०॥

कलौ हि मलभूयिष्टे जनिमानस्मि भूतले।
विना त्वत्करुणां नाथ नान्या गतिरिहास्ति मे ॥२१॥

मायूर बर्ह मकुटं गुञ्जामञ्जुलमस्तकम्।
कुन्तलालि लसत्फाल तलविन्यस्तचित्रकम् ॥२२॥

भुग्नभ्रूयुगलं स्फीतपुण्डरीकनिभेक्षणम् ।
स्फुरत्कुण्डल चण्डांशुपरिमण्डित गण्डकम् ॥२३॥

मन्दहास विलासेष त्स्फुरन्मधुरिमाधरम्।
स्निग्धमुग्धमनोहारि चिबुकं कम्बुकन्धरम् ॥२४॥

श्रीवत्स तुलसीमालाकौस्तुभाञ्चित वत्सकम्।
शुण्डाडम्बरहारि श्रीभुजदण्डचतुष्टयम् ॥२५॥

कटिबद्धकनत्काञ्चीदामपीताम्बराञ्चितम्।
मञ्जुशिञ्जानमञ्जीररञ्जितांघ्रि सरोरुहम् ॥२६॥

राधाकराम्बुजन्यस्त मुरली वादनोन्मुखम्।
त्रिभङ्गिभङ्गुरं कृष्ण तव रूपं प्रदर्शय ॥२७॥

पीत्वा नेत्रपुटाभ्यां तल्लभेय कृताकृत्यता म्।
पापीयानयमित्येवं मामुच्च मधुसूदन ॥२८॥

दुर्लभं तावदत्रेदृक्पात्रं नाथ तवाधुना ।
अयाचित महो लब्धं मा जहीहीदमच्युत ॥२९॥

अनादिवासनाश्लिष्टं मानसं मे निरन्तरम्।
प्राकृतं वस्तु भोग्यं सज्जानाति न पदं तव ॥३०॥

अतो हं करुणासिन्धो बन्धो तव कृपां सदा।
याचे नीचोप्यनाचारोप्याचार्यवचनेरितः ॥३१॥

अथवास्मद्गुरुस्स्वामी रामानुजयतीश्वर :।
प्रपत्तिं कृतवान्मह्यं महानुग्रहतस्त्वयि ॥३२॥

अतो हं निर्भरोस्म्यत्र निर्भीतोस्मि च निस्त्रपः।
निद्राहारभयैर्व्याप्तः पशुकल्पोल्पशेमुषिः ॥३३॥

निर्भरत्वाच्च निश्चिन्तो निर्भयत्वाच्च निस्त्रपः।
रामानुजपद द्वन्द्वं व्रजामि शरणं सदा ॥३४॥

पाहि मां करुणासिन्धो देवदेव श्रियःपते।
सर्वदा त्वत्पदाभोजकैङ्कर्ये च नियुंक्ष्व माम् ॥३५॥

धत्ते प्रपन्नवाणीं यः कण्ठे नित्यं स भक्तिभाक्।
नारायणकृपापात्रं भवतीह न संशयः ॥३६॥

प्रषन्नवाणीमित्येनां दृढभक्त्यार्पयद्विभोः।
नारायणस्य पादाब्जे जग्गूवकुलभूषणः ॥३७॥

इति श्रीयदुशैलवासि
बालधन्वि जग्गू वकुलभूषण
विरचिता
प्रपन्नवाणी
संपूर्णा
श्रीः

॥ ಶ್ರೀಃ ॥

ಶ್ರೀಮತೇ ರಾಮಾನುಜಾಯ ನಮಃ

ಶುಭಮಸ್ತು

ಅಮೃತಾಧಿರೋಹಿಣೀ

ಸ ಜಯತಿ ಯತಿಕುಲಕೇತುಃ
ಸಂಸೃತಿಸಾಗರ ವಿಲಂಘನೇ ಸೇತುಃ ।
ಹರಿಪದಸೇವಾಹೇತುಃ ।
ಮಂಚಸ್ವವಿತಾನಕೋರಮಾನೇತುಃ । ॥1॥

ತಾತ್ಪರ್ಯ : ಯತಿಗಳ ಸಮೂಹಕ್ಕೆ ಧ್ವಜಪ್ರಾಯನಾಗಿಯೂ, ಈ ಸಂಸಾರವೆಂಬ ಸಮುದ್ರವನ್ನು ದಾಟಲು ಸೇತುವಾಗಿಯೂ, ಭಗವಂತನಾದ ಶ್ರೀ ಮನ್ನಾರಾಯಣನ ಪಾದ ಸೇವೆಗೆ ಕಾರಣಭೂತನಾಗಿಯೂ , ಶ್ರೀಯಃಪತಿಗೆ ಮಲಗುವ ಮಂಚವಾಗಿಯೂ, (ಆದಿಶೇಷನಾಗಿಯೂ) ಜಗದ್ವಿಖ್ಯಾತನಾಗಿಯೂ, ಅಂದರೇ ಜಗದ್ಗುರುವಾಗಿಯೂ ಇರುವ ರಾಮಾನುಜಯತಿವರ್ಯನು ಸರ್ವೋತ್ಕೃಷ್ಟನಾಗಿ ಪ್ರಕಾಶಿಸುತ್ತಲಿರುವನು,

ವಿನಿಂದ್ಯಾಚಾರೋಹಂ ದುರಿತನಿಲಯೋ ಲಕ್ಷ್ಮಣಮುನೇ
ಸಮರ್ಥ ಸ್ತೋತುಂ ತ್ವಾಂ ಕಥಮಿವ ಭವೇಯಂ ಗುಣನಿಧಿಂ ।
ತಥಾಪ್ಯಸ್ತಾಶಂಕಸ್ತ್ವಯಿ ಕೃತಭರಸ್ತ್ವಾಮಿ ನಿತರಾಂ
ಕೃಪಾಂ ಸ್ಮಾರಂಸ್ಮಾರಂ ತವ ರಹಸಿ ಮೂಕೇ ಪ್ರಕಟಿತಾಂ । ॥2॥

ಎಲೈ ಲಕ್ಷ್ಮಣಮುನಿಯೇ, ಕಲ್ಯಾಣಗುಣ ಪರಿಪೂರ್ಣನಾದ ನಿನ್ನನ್ನು ನಿಂದಾರ್ಹವಾದ ನಡತೆಯುಳ್ಳ ಪಾಪಿಷ್ಠನಾದ ನಾನು ಹೇಗೆ ತಾನೇ ಸ್ತೋತ್ರಮಾಡಲು ಶಕ್ತನಾಗುವೆನು, ಆದರೂ ಕೂಡ ನಿನ್ನನ್ನು ಆಶ್ರಯಿಸಿದ ಮೂಗನ ವಿಷಯದಲ್ಲಿ ನೀನು ತೋರಿಸಿದ ದಯೆಯನ್ನು ಸ್ಮರಿಸಿ ನಿರ್ಭಯನಾಗಿ ಸ್ವಲ್ಪವೂ ಅಳುಕದೆ ನನ್ನ ಸಮಸ್ತ ಭಾರವನ್ನೂ ನಿನ್ನಲ್ಲಿಟ್ಟು ನಿನ್ನನ್ನು ಸ್ತೋತ್ರಮಾಡಲು ಉಪಕ್ರಮಿಸುವೆನು.

ಮುಕುಂದಾಂಘ್ರಿದ್ವಂದ್ವಪ್ರಣಯಿನಮನಲ್ಪೋಜ್ವಲತನುಂ
ವಿಭೂತ್ಯೋರ್ನೇತಾರಂ ತರಣಿ ಮುರು ಸಂಸಾರಜಲಧೇಃ ।
ದಯಾಂಭೋಧಿಂ ಮೋಕ್ಷಪ್ರದಮಖಿಲ ಲೋಕೈಕಶರಣಂ
ಗುರುಂ ವಂದೇ ನಿತ್ಯಂ ರುಚಿರಚರಣಂ ಲಕ್ಷ್ಮಣಮುನಿಂ ॥3॥

ಇಹಲೋಕ ಮತ್ತು ಪರಲೋಕದ ಸುಖಗಳನ್ನು ದಯಪಾಲಿಸುವ ಮುಕುಂದನ ಚರಣಾರವಿಂದಗಳ ಕೈಂಕರ್ಯದಲ್ಲೇ ನಿರಂತರವೂ ನಿರತರಾಗಿರುವ, ತೇಜೋಮಯಸ್ವರೂಪರಾದ ಮತ್ತು ಲೀಲಾವಿಭೂತಿ, ನಿತ್ಯವಿಭೂತಿಗಳಿಗೆ ಸ್ವಾಮಿಯಾದ, ಈ ಸಂಸಾರಸಾಗರದಿಂದ, ಉದ್ಧರಿಸುವ, ದಯಶೀಲರಾದ, ಮೋಕ್ಷವನ್ನು ಕರುಣಿಸುವ, ಸಮಸ್ತ ಲೋಕಕ್ಕೂ ರಕ್ಷಕರಾಗಿರುವ, ಆಶ್ರಯಿಸಲು ಸ್ಪೃಹಣೀಯವಾದ ಪಾದಾರವಿಂದಗಳುಳ್ಳ, ಲೋಕ ಗುರುವಾದ ಶ್ರೀರಾಮಾನುಜಯತಿವರ್ಯರನ್ನು ಪ್ರತಿನಿತ್ಯವೂ ನಮಸ್ಕರಿಸುವೆನು.

ಅಹಂ ಯಾಚೇ ದೀನೋ ಯತಿವರ ಹೃತಾಪತ್ಸಮುದಯ
ಸ್ಮರಜ್ವಾಲಾಲೀಢೇ ಸತತತರಲೇ, ದುಃಖ ಬಹುಲೇ
ಅನೇಕಾಶಾಬದ್ಧೇ ಮಮ ಹೃದಿ ಮನೋಜ್ಞಂ ಮೃದುತರಂ
ಪದಾಂಭೋಜಂ ಕೃತ್ವಾ ಪರಿಹರ ಮಹಾತಾಪಮಧುನಾ ॥4॥

ಎಲ್ಲೈ ರಾಮಾನುಜಮುನಿವರ್ಯರೇ, ದೀನನಾದ ನಾನು ಕೇಳಿಕೊಳ್ಳುವುದೇನೆಂದರೆ ನಿಮ್ಮ ಕೋಮಲವಾದ ಪಾದಾರವಿಂದಗಳನ್ನು ನನ್ನ ಹೃದಯದಲ್ಲಿಟ್ಟು ನನ್ನ ಅಪರಿಮಿತವಾದ ಸಂತಾಪಗಳನ್ನು ಈಗಲೇ ಪರಿಹರಿಸು, ನನ್ನ ಹೃದಯದಲ್ಲಿ ಸಂತಾಪಕ್ಕೆ ಕಾರಣವೇನೆಂದರೆ, ಅನೇಕ ವಿಧವಾದ ಆಶೆಗಳೆಂಬ ಹಗ್ಗದಿಂದ ಅದು ಕಟ್ಟಲ್ಪಟ್ಟಿದೆ, ಮನ್ಮಥಾಗ್ನಿಯ ಜ್ವಾಲೆಗಳಿಂದ ಆವರಿಸಲ್ಪಟ್ಟಿದೆ, ಆ ಜ್ವಾಲಾತಾಪವನ್ನು ಸಹಿಸಲಾರದೇ ಯಾವಾಗಲೂ ಚಂಚಲವಾಗಿದೆ. ಆದ್ದರಿಂದಲೇ ಕ್ಲೇಶ ಪಡುತ್ತಿದೆ. ಈ ರೀತಿ ಮಹಾತಾಪಕ್ಕೆ ಒಳಗಾದ ನನ್ನ ಹೃದಯದಲ್ಲಿ ಮನೋಹರವಾದ ಕೋಮಲವಾದ ನಿನ್ನ ಅಡಿದಾವರೆಗಳನ್ನಿಟ್ಟು ಹಿಂದೆ ತಿಳಿಸಿದ ತಾಪಗಳನ್ನು ಪರಿಹರಿಸಿ, ಇದೊಂದನ್ನೇ ನಿಮ್ಮಲ್ಲಿ ನಾನು ಕೇಳಿಕೊಳ್ಳುವುದು.

ಸನೇಃ ಪ್ರಾಗೇವಾನ್ನಂ ವಿಧಿಕೃತಮಿತಿ ಪ್ರಾಜ್ಞಘಣಿತಂ
ಮುಹುಶ್ಯ್ರುತ್ವಾಪ್ಯೇನಂ ಪ್ರತಿಕಲಮಹೋಜೀವನಕೃತೇ
ತ್ವದೀಯಾಂಘ್ರ್ಯೇತ್ಯಕ್ತ್ವಾ ಕುಪತಿಪದಸೇವಾಕುತುಕಿನಂ
ಕಟಾಕ್ಷೈಃ ಪಾಪಂ ಮಾಂ ಪ್ರಯತಮಧುನಾ ಲಕ್ಷ್ಮಣ ಕುರು ॥5॥

ಎಲೈ ಲಕ್ಷ್ಮಣಮುನಿಯೇ, ಭಗವಂತನು ಚೇತನನನ್ನು ಸೃಷ್ಟಿಸುವುದಕ್ಕೆ
ಮೊದಲೇ ಅವನಿಗಾಗಿ ಅನ್ನವನ್ನು ಸೃಷ್ಟಿಸಿರುವನು, ಎಂದು ತಿಳಿದ ಜ್ಞಾನಿಗಳ
ಮಾತನ್ನು ನಾನು ಪದೇ ಪದೇ ಕೇಳುತ್ತಲಿದ್ದಾಗ್ಯೂ ಪ್ರತಿಯೊಂದು ಕ್ಷಣದಲ್ಲೂ
ಜೀವನಕ್ಕಾಗಿ ನೀಚಸೇವೆಯನ್ನು ಮಾಡುತ್ತಲಿರುವೆನು, ನಿನ್ನ
ಪಾದಾರವಿಂದಗಳನ್ನು ದೂರ ತ್ಯಜಿಸಿದೆನು, ಆದ್ದರಿಂದಲೇ ನಾನು ಮಹಾ
ಪಾಪಿಷ್ಠನು, ಈಗಲೇ ಕಟಾಕ್ಷಿಸಿ ನನ್ನನ್ನು ಪರಿಶುದ್ಧನನ್ನಾಗಿಸು.

ನಯಾಂಭೋಧೇ ರಾಮಾವರಜ ಮಮ ಕರ್ಮಾನುಗುಣಕಾಂ
ಜನಿಂ ಶಶ್ವನ್ಮಹ್ಯಂ ವಿಧಿರಪಿ ದದಾತು ಕ್ವಚಿದಪಿ
ಸುಖಂ ದುಃಖಂ ವಾ ಸ್ಯಾತ್ತದನುಗುಣಕಂ ಕಿಂತು ಸತತಂ
ತ್ವದೀಯಾಂಘ್ರ್ಯಾನಂ ಪ್ರತಿಜನಿ ಭವತ್ವಸ್ಯ ಹೃದಿ ಮೇ ॥6॥

ಕರುಣಾನಿಧಿಯೇ, ರಾಮಾನುಜಸಂಯಮಿಯೇ, ನನ್ನ ಪೂರ್ವಾರ್ಜಿತವಾದ
ಕರ್ಮಕ್ಕನುಸಾರವಾಗಿ ವಿಧಿಯು ಮೂರುಲೋಕಗಳಲ್ಲಿ ಎಲ್ಲಿಯಾದರೂ
ಮಾರಿಬಾರಿಗೂ ಜನ್ಮವನ್ನು ನೀಡಲಿ, ಆಯಾಯಾ ಜನ್ಮಗಳಲ್ಲಿ
ಕರ್ಮಕ್ಕನುಗುಣವಾಗಿ ಸುಖವೋ ದುಃಖವೋ ನನಗುಂಟಾಗಲಿ, ಅದಕ್ಕಾಗಿ
ಭಯಪಡುವವನಲ್ಲ ನಾನು, ಮತ್ತೇನೆಂದರೆ , ಎಲ್ಲಿ ಜನಿಸಿದರೂ,
ಯಾವಜನ್ಮದಲ್ಲಿದ್ದರೂ, ಅಲ್ಲಲ್ಲಿ ಆಯಾಯಾ ಜನ್ಮದಲ್ಲಿ ಅನವರತವೂ ನಿನ್ನ
ಪಾದಾರವಿಂದಗಳ ಧ್ಯಾನವು ನನಗಿರಲೆಂದು ಬೇಡಿಕೊಳ್ಳುವೆನು.

ಕರಸ್ಥೇ ಸಂಸಕ್ತಂ ನಯನಯುಗಲಂ ಗಾನಕುತುಕಂ
ಶ್ರುತಿದ್ವಂದ್ವಂ ದಾನಗ್ರಹಣ ನಿಪುಣಂ ಪಾಣಿಯುಗಲಂ ।
ಕರಸ್ತೋತ್ರಾಸಕ್ತಂ ವದನಮಖಿಲಂ ಮೇಸ್ಯ ಕರಣಂ
ಕದಾವಾ ತ್ವತ್ಸೇವಾಮತುಲವಿಭವಾಂ ವಕ್ಷ್ಯತಿ ಮುನೇ ॥7॥

ಎಲ್ಲೆ, ರಾಮಾನುಜಯತೀಶ್ವರನೇ, ನನ್ನ ಎರಡು ಕಣ್ಣುಗಳೂ ಯಾವಾಗಲೂ ಪರಹೆಂಗಳೆಯರನ್ನು ನೋಡುವುದರಲ್ಲೇ ಆಸಕ್ತವಾಗಿವೆ, ಎರಡೂ ಕಿವಿಗಳೂ ನಿನ್ನ ವಿಷಯಕವಲ್ಲದ ತುಚ್ಛವಾದ ಗಾನಗಳನ್ನು ಕೇಳುವುದರಲ್ಲೇ ಮಗ್ನವಾಗಿವೆ, ನನ್ನ ಎರಡು ಕೈಗಳೂ ದಾನವನ್ನು ತೆಗೆದುಕೊಳ್ಳುವುದರಲ್ಲಿ ಸಮರ್ಥವಾಗಿವೆ, ನನ್ನ ಬಾಯಿಯು ಇತರರನ್ನು ಸ್ತೋತ್ರಮಾಡುವುದರಲ್ಲಿ ಆಸಕ್ತವಾಗಿದೆ, ಇದೇ ರೀತಿ ಇತರ ಇಂದ್ರಿಯಗಳೂ ನಿನ್ನ ವಿಷಯವನ್ನು ಬಿಟ್ಟು ಬೇರೆ ವಿಷಯಗಳಲ್ಲಿ ಮಗ್ನವಾಗಿವೆ, ಹೀಗಿರುವ ನನ್ನ ಇಂದ್ರಿಯಗಳು ನಿನ್ನ ಸೇವಾ ವಿಷಯದಲ್ಲಿ ಯಾವಾಗ ಮಗ್ನವಾಗುವವೋ ನಾನರಿಯೆ.

ಅನಾತ್ಮನ್ಯಾತ್ಮತ್ವಂ ತರಲಜಗತಿ ಸ್ಥೈರ್ಯಧಿಷಣಾ
ಸುಖಿತ್ವಂ ದುಃಖೇಸ್ಪಕ್ಷಿತ ವಿಸರೇ ವರ್ಷ್ಮಣಿ ರುಚಿಃ
ಭವಾಬ್ಧೇ ರಾಕಾಯಾಂ ಸತತಮಪಿ ನಾರ್ಯಾಮಭಿರುಚಿಃ
ಪ್ರಸಾದಾಭಾವತ್ತೇ ಯತಿವರ ಮಮೈವಂ ಪ್ರಭವತಿ । ॥8॥

ಯತಿಶ್ರೇಷ್ಠನೇ, ಆತ್ಮವಲ್ಲದ ಈ ಶರೀರವನ್ನೇ ಆತ್ಮವೆಂದೂ, ಅಸ್ಥಿರವಾದ ಈ ಜಗತ್ತನ್ನು ಸ್ಥಿರವೆಂದೂ ತಿಳಿದುಕೊಂಡಿರುವುದಲ್ಲದೆ, ದುಃಖಮಯವಾದ ಪ್ರತಿಯೊಂದು ವಿಷಯದಲ್ಲೂ ಸುಖತ್ವಜ್ಞಾನವೂ, ರಕ್ತಮಾಂಸ ಮೇದಸ್ಸುಮೂಹಮಯವಾದ ಹೇಯವಾದ ಈ ಶರೀರದಲ್ಲಿ ಅಭಿಮಾನವೂ, ಈ ಸಂಸಾರಸಾಗರವನ್ನು ವೃದ್ಧಿಗೊಳಿಸುವ ಸ್ತ್ರೀಯರಲ್ಲಿ ಅಭಿರುಚಿಯೂ, ನನಗೆ ಉಂಟಾಗಲು, ನನ್ನ ಮೇಲೆ ನಿನ್ನ ಅನುಗ್ರಹವಿಲ್ಲದಿರುವುದೇ ಕಾರಣವಲ್ಲವೇ. ಆದ್ದರಿಂದ ನನ್ನನ್ನು ಅನುಗ್ರಹಿಸಿ ಹಿಂದೆ ಹೇಳಿದ ಅಜ್ಞಾನಪರಂಪರೆಗಳನ್ನು ದೂರಮಾಡು.

ರಸೈಷ್ಪಡ್ಭಿಸ್ಸಮ್ಯಗ್ಗತಿಕುಲಪತೇ ಪೋಷಿತಮಿದಂ
ಶರೀರಂ ಚಿತ್ತಂತು ಸ್ಮರಪರವಶಂ ಚಂಚಲಮಪಿ ।
ಅತಸ್ಸ್ಥಿತ್ವೈಕತ್ರ ತ್ವದರುಣಪದಂ ಧ್ಯಾತುಮಲಸೋ
ಯಥಾಲರ್ಕೋ ಧಾವಾಮ್ಯಖಿಲಪುರವರ್ತ್ಮಸ್ವಹಮಪಿ ॥9॥

ಯತಿಗಳ ಸಮೂಹಕ್ಕೆ ಸ್ವಾಮಿಯಾಗಿರುವ ರಾಮಾನುಜಮುನಿವರ್ಯನೇ ಮಧುರಾಮ್ಲಾದಿ ಷಡ್ರಸಗಳಿಂದ ಈ ಶರೀರವು ಪೋಷಿಸಲ್ಪಟ್ಟಿದೆ. ಈ ಮನಸ್ಸೋ ಮನ್ಮಥಪರವಶವಾಗಿ ಚಂಚಲವಾಗಿರುವುದು. ಆದ್ದರಿಂದಲೇ ಒಂದೇ ಸ್ಥಲದಲ್ಲಿನಿಶ್ಚಂಚಲವಾಗಿ ಕುಳಿತು ಚಿಗುರಿನೋಪಾದಿಯಲ್ಲಿಕೆಂಪಾದ ನಿನ್ನ ಚರಣಾರವಿಂದವನ್ನು ಧ್ಯಾನವಮಾಡಲು ಸೋವಮಾರಿಯಾಗಿ ಹುಚ್ಚುನಾಯಿಯಂತೆ ಎಲ್ಲಾ ಬೀದಿಗಳಲ್ಲೂ ನಾನೂ ಕೂಡ ಸುತ್ತಿ ಅಲೆದಾಡುತ್ತಿರುವೆನು.

ಅನಿರ್ವಾಚ್ಯಂ ಯೋನೇರ್ಜನನಸಮಯೇ ಯಚ್ಚಪುರುಷಂ
ಸಮುದ್ಭೂತಂ ದುಃಖಂ ಶಶಪವನಸಂಚೋದಿತತಯಾ ।
ಪ್ರಯಾಣೇ ಪ್ರಾಣಾನಾಂ ಯದಪರಿಮಿತಂ ದುಃಖಮಚಿರಾ
ದ್ದಯಾಬ್ಧೇ ತತ್ಸರ್ವಂ ಪರಿಹರ ಮಮೈತಸ್ಯ ಯತಿರಾಟ್ ॥ 10 ॥

ಯತಿರಾಜಾ, ಜನನ ಸಮಯದಲ್ಲಿ ಶಶನೆಂಬ ವಾಯುವಿನಿಂದ ನೂಕಲ್ಪಟ್ಟ ಈ ಚೇತನನು, ಬಾಯಿಯಿಂದ ಹೇಳಲಸಾಧ್ಯವಾದ ಕ್ಲೇಶವನ್ನು ಅನುಭವಿಸುವನು. ಅದೇ ರೀತಿ ಮರಣಕಾಲದಲ್ಲೂ ಈ ಚೇತನನು ಅನಿರ್ವಚನೀಯವಾದ ಕ್ಲೇಶವನ್ನು ಅನುಭವಿಸುವನು. ಆದ್ದರಿಂದಲೇ, ''ಜನನ ಮರಣ ನಕ್ರಚಕ್ರಾಸ್ಪದೇ'' ಎಂದು ಹೇಳಿರುವುದು. ಅದಕ್ಕಾಗಿಯೇ ಜ್ಞಾನಿಗಳು ಈ ಸಂಸಾರಸಾಗರದಿಂದ ಪಾರುಮಾಡೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಿರುವರು. ನಾನೂ ಕೂಡ ದಯಾಪೂರ್ಣನಾದ ನಿನ್ನಲ್ಲಿ ಪ್ರಾರ್ಥಿಸುವುದೇನೆಂದರೆ, ಈ ಸಂಸಾರಚಕ್ರದಿಂದ ನನ್ನನ್ನೂ ಪಾರುಮಾಡೆಂದು.

ನ ಬಂಧುರ್ನೋಮಿತ್ರಂ ನ ಸುತನಿವಹೋನಾಪಿ ಗೃಹಿಣೀ
ನ ಮಾತಾ ನೋತಾತಃಪ್ರಭವತಿ ತದಾ ಲಕ್ಷ್ಮಣಮುನೇ ।
ಯದಾ ಕರ್ಷಂತ್ಯೇನಂ ಯಮಭಟಗಣಾಃ ಪಾಶನಿಕರೈಃ
ದಯಾಸಿಂಧೋ ಬಂಧೋ ತವ ಚರಣ ಏವೈಕಶರಣಂ ॥11॥

ರಾಮಾನುಜಯತಿವರ್ಯನೇ, ಯಮಭಟರು ಪಾಶಗಳಿಂದ ಇವನನ್ನು ಎಳೆಯುವಾಗ, ಅಂದರೆ ಮರಣಕಾಲದಲ್ಲಿನಾನು ಬಂಧು ಎಂದು,

ಜೀವಿತಕಾಲದಲ್ಲಿ ತಾನು ಬಂಧು ಎಂದು, ಕೂಡಿಯಾಡುತ್ತಲಿದ್ದ ಯಾವ ಬಂಧುಜನಗಳೂ ಸಹಾಯಕರಾಗಿ ಆಗುವುದಿಲ್ಲ. ಹಾಗೆಯೇ, ಆಪತ್ಸ್ನೇಹಿತರಾದ ಜನರೂ ಇವನನ್ನು ಉಳಿಸಿಕೊಳ್ಳಲು ಶಕ್ತರಾಗುವುದಿಲ್ಲ. ಮಕ್ಕಳನೇಕರಿದ್ದರೂ ಇವನನ್ನು ಉಳಿಸಿಕೊಳ್ಳಲಾರರು. ಕೈಹಿಡಿದ ಪತ್ನಿಯೂ ಕೂಡಾ ಇವನಿಗೆ ಸಹಾಯಕಳಾಗಲಾರಳು. ಪ್ರಸವಿಸಿ ಪ್ರೇಮದಿಂದ ಸಲಹಿದ ತಾಯಿಯೂ, ವಿದ್ಯಾಬುದ್ಧಿಗಳನ್ನು ಕಲಿಸಿ ವೃದ್ಧಿಗೆ ತಂದ ತಂದೆಯೂ ಕೂಡ ಈ ಸಮಯದಲ್ಲಿ ಉಳಿಸಿಕೊಳ್ಳಲಾರರು. ಅಂತಹ ಸಂದರ್ಭದಲ್ಲಿ ಪರಿಪೂರ್ಣನಾದ ನೀನೊಬ್ಬನೇ ಬಂಧು. ನಿನ್ನ ಪಾದಾರವಿಂದಗಳೇ ನನಗೆ ರಕ್ಷಕವು.

ಮುಹುರ್ಯಾಚೇ ಸ್ವಾಮಿನ್ನಜನಕ ಜನನೀ ಸೂನು ಗೃಹಿಣೀ
ಸುಹೃದ್ಬಂಧುಷ್ವೇವಂ ಭವನವಸನದ್ರವ್ಯನಿವಹೇ ।
ಅನಂತಾ ಯಾ ಪ್ರೀತಿಃ ಪ್ರಭವತಿ ಸದಾ ಮಹ್ಯಮಿಹ ತಾ
ಮನಂತಾತ್ಮನ್ಪ್ರೀತಿಂ ತವ ಚರಣಯೋರ್ದೇಹಿ ಕೃಪಯಾ ॥12॥

ಆದಿಶೇಷನ ಸ್ವರೂಪಿಯಾದ ನನ್ನ ಸ್ವಾಮಿಯೇ, ಪದೇ ಪದೇ ನಾನು ನಿನ್ನಲ್ಲಿ ಕೇಳಿಕೊಳ್ಳುವುದೇನೆಂದರೆ, ಪೂಜ್ಯರಾದ ನನ್ನ ತಂದೆ, ತಾಯಿ ಮತ್ತು ನನ್ನ ವಾತ್ಸಲ್ಯಕ್ಕೆ ಪಾತ್ರರಾದ ಮಕ್ಕಳುಗಳು, ನನ್ನ ಪ್ರೇಮಕ್ಕೆ ಒಳಗಾದ ಪತ್ನಿ, ಪ್ರೀತಿಗೆ ಒಳಗಾದ ಸ್ನೇಹಿತರು, ವಿಶ್ವಾಸಕ್ಕೆ ಪಾತ್ರರಾದ ಬಂಧುಗಳು, ಇವರುಗಳಲ್ಲಿಯಾವ ಅಭಿಮಾನವುಂಟೋ, ಹಾಗೆಯೇ ನನ್ನ ಮನೆ, ವಸ್ತ್ರ, ಧನ, ಧಾನ್ಯ ಇವೇ ಮೊದಲಾದ ದ್ರವ್ಯಗಳಲ್ಲಿಯಾವ ಅಭಿಮಾನವುಂಟೋ, ಆ ಅಭಿಮಾನಗಳೆಲ್ಲವನ್ನೂ ನಿನ್ನ ಚರಣಾರವಿಂದಗಳಲ್ಲಿ ಇಡುವಂತೆ ಕೃಪೆಯಿಂದ ಅನುಗ್ರಹಿಸು. ಇದೊಂದನ್ನೇ ನಿನ್ನಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದು,

ನ ಶಕ್ಯಂ ಮತ್ಪಾಪಂ ಕ್ಷಣವಿರಚಿತಂ ವಕ್ತುಮಪಿ ಯ
ದ್ವಿಧಾತ್ರಾ ಶೇಷೇಣಾಪ್ಯಖಿಲವದನೈರ್ವತ್ಸರಶತಂ ।
ಮುಹುಸ್ತಾದೃಕ್ಪಾಪಂ ಯತಿವರ ನೃಶಂಸೋ ವಿರಚಯ
ನ್ನುದಾತ್ಮಾ ನಿರ್ಲಜ್ಜಸ್ತವ ಧುರಿ ಚರೇಯಂ ಗತಭಯಃ ॥13॥

ಯತಿಶ್ರೇಷ್ಠನೇ, ಕಣ್ಣುಮುಚ್ಚಿ ತೆಗೆಯುವುದರೊಳಗೆ ನಾನು ಮಾಡಿದ ಪಾಪವನ್ನು ನಾಲ್ಕು ಮುಖವುಳ್ಳ ಬ್ರಹ್ಮನೂ, ಸಾವಿರ ಮುಖವುಳ್ಳ, ಎರಡು ಸಾವಿರ ನಾಲಿಗೆಯುಳ್ಳ ಆದಿಶೇಷನೂ, ನೂರು ವರ್ಷಗಳ ಕಾಲ ಅನವರತವೂ ಹೇಳುತ್ತಿದ್ದರೂ, ಅದು ಕೊನೆಗಾಣುವಂತಿಲ್ಲ. ಈ ರೀತಿ ಪ್ರತಿಯೊಂದು ಕ್ಷಣದಲ್ಲೂ ಪಾಪಕಾರ್ಯಗಳನ್ನೆಸಗುತ್ತಲಿರುವೆನು. ಆದ್ದರಿಂದಲೇ, ನಾನು ಬಹಳ ಕ್ರೂರನು, ದುರಾತ್ಮನು, ನಿರ್ಲಜ್ಜನು. ಹೀಗಿದ್ದರೂ, ನಿನ್ನ ಮುಂದೆ ನಿರ್ಭಯನಾಗಿ ಸಂಚರಿಸುವೆನಲ್ಲಾ, ಇದಕ್ಕಿಂತಲೂ ಆಶ್ಚರ್ಯವುಂಟೇ?

ಮನೋಜ್ಞೇ ವೈಕುಂಠೇ ಸತತಮಪಿ ಶೇಷತ್ವವಿಭವಂ
ಪ್ರದರ್ಶ್ಯ ಶ್ರೀನೇತುಸ್ಸಕಲಪರಿಚರ್ಯಾಂ ವಿರಚಯನ್
ವಯಂ ವಿಷ್ಣೋಶ್ಶೇಷಾ ಇತಿ ಭುವಿ ಚ ಶೇಷತ್ವಧಿಷಣಾ
ಮಕಾರ್ಷೀರ್ಮರ್ತ್ಯಾನಾಂ ಬತ ತವ ಕೃಪಾ ಲಕ್ಷ್ಮಣಮುನೇ ॥14॥

ಯತಿವರ್ಯ, ಅನವರತವೂ ಆನಂದಮಯವಾಗಿ ಮನೋಹರವಾದ ವೈಕುಂಠವೆಂಬ ದೇಶವಿಶೇಷದಲ್ಲಿ"ನಿವಾಸಶಯ್ಯಾಸನಪಾದುಕಾಂಶು ಕೋಪಧಾನವರ್ಷಾತಪವಾರಣಾದಿಭಿಃ, ಶರೀರಭೇದೈಸ್ತವ ಶೇಷತಾಂ ಗತೈಃ," ಎಂಬಂತೆ ಶ್ರೀಯಃಪತಿಯ ಸಕಲ ವಿಧವಾದ ಕೈಂಕರ್ಯಗಳನ್ನೂ ನಿರಂತರವಾಗಿ, ಆದಿಶೇಷನಾದ ನೀನು ಆಚರಿಸುತ್ತಿರುವನಾಗಿ ಪ್ರಕಾಶಿಸುತ್ತಲಿರುವೆ. ಈ ಭೂಲೋಕದಲ್ಲಿ ನೀನೇ ರಾಮಾನುಜನಾಗಿ ಅವತರಿಸಿ, ಶ್ರೀಯಃಪತಿಯಾದ ಶ್ರೀಮನ್ನಾರಾಯಣನು, ಸರ್ವಶೇಷಿಯು, ನಾವೆಲ್ಲರೂ ಅವನಿಗೆ ಶೇಷಭೂತರು, ನಾನು ಶೇಷನಾಗಿ ಭಗವಂತನ ಸರ್ವ ವಿಧ ಕೈಂಕರ್ಯಗಳನ್ನೂ, ಯಾವ ರೀತಿ ಮಾಡುವೆನೋ, ಅದೇ ರೀತಿ ಶೇಷಭೂತರಾದ ನಿಮ್ಮಗಳಿಗೂ ಶೇಷಿಯ ಸರ್ವ ವಿಧ ಕೈಂಕರ್ಯಗಳನ್ನು ಮಾಡಲು ಅಧಿಕಾರವುಂಟೆಂದು, ಉಪದೇಶಿಸಿ, ಜನಗಳ ಹೃದಯಗಳಲ್ಲಿ ಶೇಷತ್ವಜ್ಞಾನವನ್ನುಂಟುಮಾಡಿದೆಯಲ್ಲವೇ, ನಿನ್ನ ದಯೆಯನ್ನು ಎಷ್ಟು ಹೇಳಿದರೂ ಸಾಲದು, ಆಶ್ಚರ್ಯಕರವಾದದ್ದು ನಿನ್ನ ದಯೆ.

ಶತೇತ್ಯಾ ಯುಷ್ಯರ್ಧಂ ಸ್ವಪನಸಮಯೇಷ್ವೇವ ಗಲಿತಂ
ಶಿಶುತ್ವೇ ತಾರುಣ್ಯೇ ಪರುಷಜರತತ್ವೇ ತದನುಗೈಃ ।

ರಸೈರ್ನಷ್ಟಂ ಶಿಷ್ಟಂ ಭವತಿ ಸತತಂ ಲಕ್ಷ್ಮಣಮುನೇ
ತ್ವದೀಯಾಂಘ್ರಿಧ್ಯಾನಂ ಕ್ಷಣಮಪಿ ಮಯಾ ಹಂತ ನ ಕೃತಂ ॥ 15

ರಾಮಾನುಜಯತಿವರ್ಯ, 'ಶತಮಾನಂ ಭವತಿ ಶತಾಯುಃ ಪುರುಷ
ಎಂಬಂತೇ, ಮನುಷ್ಯನ ನೂರು ವರ್ಷ ಆಯುಸ್ಸಿನಲ್ಲಿ ಐವತ್ತುವರ್ಷಗ
ನಿದ್ರೆಯಲ್ಲೇ ಕಳೆದುಹೋಗುವುವು. ಇನ್ನುಳಿದ ಐವತ್ತು ವರ್ಷಗಳು ''ಬಾ
ಸ್ತಾವತ್ಕ್ರೀಡಾಸಕ್ತಃ, ತರುಣಸ್ತಾವತ್ತರುಣೀಸಕ್ತಃ, ವೃದ್ಧಸ್ತಾವಚ್ಚಿಂತಾಸಕ್ತಃ
ಎಂಬಂತೆ, ಬಾಲ್ಯದಲ್ಲಿ ಅದಕ್ಕನುಗುಣವಾದ ಆಟಗಳಿಂದಲ
ಯೌವನದಲ್ಲಿ ಸ್ರಕ್ಚಂದನಾದಿ ವಿಷಯ ಸುಖಾನುಭವಗಳಿಂದಲ
ವಾರ್ಧಕ್ಯದಲ್ಲಿ, ರೋಗಾದ್ಯುಪದ್ರವಗಳ ಚಿಂತೆಗಳಿಂದಲ
ಕಳೆದುಹೋಗುವುವು. ಹೀಗಿರುವಲ್ಲಿ ನಿನ್ನ ಚರಣಾರವಿಂದದ ಧ್ಯಾನ
ಅವಕಾಶವೇ ಇಲ್ಲದಂತಾಯಿತು. ನಾನೂ ಕೂಡಾ ಅದೇ ರೀತಿಯಲ್ಲಿಒಂ
ಕ್ಷಣಕಾಲವೂ, ನಿನ್ನ ಪಾದಕಮಲಧ್ಯಾನವನ್ನು ಮಾಡಲಿಲ್ಲ, ಅದಕಾ
ದುಃಖಿಸುವೆನು,

ವಿಹಾಯ ತ್ವತ್ಸೇವಾಂ ಯತಿಕುಲಪತೇ ಮಾರ್ಗಣಕೃತೇ
ಮೃಗಾಕ್ಷೀಣಾಂ ಹೇಯಕ್ಷಣಿಕಸುಖದಾನಾಂ ಚ ತೃಷಯಾ
ಸ್ವಯೂಧಾತ್ಸ್ರಸ್ತಾಯಾ ಭಯಚಲಹರಿಣ್ಯಾ ನಯನವ
ತ್ಸುದೂರಂ ಚಿತ್ತಂ ಮೇ ತರಲ ತರಲಂ ಧಾವತಿ ಸದಾ ॥16

ಯತಿಕುಲಪತಿಯೇ, ನಿನ್ನ ಚರಣಾರವಿಂದದ ಸೇವೆಯನ್ನು ತ್ಯಜಿ
ಹೇಯವಾದ, ಮತ್ತು ಕ್ಷಣಿಕವಾದ ಸುಖವನ್ನು ಉಂಟುಮಾಡು
ಅಂಗನೆಯರನ್ನು ಆಶೆಯಿಂದ ಹುಡುಕಲು, ನನ್ನ ಮನಸ್ಸು, ತನ್ನ ಗುಂಪಿನಿಂ
ತಪ್ಪಿಸಿಕೊಂಡು ಓಡಿ ಒಂಟಿಯಾದ ಹೆಣ್ಣು ಜಿಂಕೆಯ ಕಳವಳಗೊಂ
ಚಂಚಲವಾದ ಕಣ್ಣಿನಂತೇ ನಾಲ್ಕು ದಿಕ್ಕಿನಕಡೆಗೂ ಯಾವಾಗಲ
ಓಡುತ್ತಿರುವುದು,

ಸ್ವಕರ್ಮಾಖ್ಯಂ ಬೀಜಂ ಜಗತಿ ಬಹುಶಸ್ಸಂಚಿತಮಸೌ
ಚಿರಾದುಪ್ತಾ ಕ್ಷೇತ್ರೇ ತದನುಗುಣಮಾವಿಷ್ಕೃತಮಿಹ ।

ಫಲಂ ಭುಂಜಾನಸ್ಸನ್ಕೃಷಿಕ ಇವ ತಲ್ಲಕ್ಷ್ಮಣಮುನೇ
ಪ್ರಸಾದಾಭಾವಾತ್ತೇ ಗಲಿತ ಹರಿಭಕ್ತಿರ್ವಿಚರತಿ ॥17॥

ಯತಿರಾಜ, ಈ ಚೇತನನು, ಜನ್ಮಜನ್ಮಾಂತರಗಳಿಂದ, ಅನೇಕ ವಿಧವಾಗಿ ಸಂಚಿತವಾದ (ಕೂಡಿಸಿ ಇಟ್ಟುಕೊಂಡಿರುವ) ತನ್ನ ಪುಣ್ಯ ಪಾಪರೂಪವಾದ ಕರ್ಮವೆಂಬ ಬೀಜವನ್ನು ಕ್ಷೇತ್ರದಲ್ಲಿ (ಭೂಮಿಯಲ್ಲಿ ಶರೀರದಲ್ಲಿ) ಬಿತ್ತಿ ಆ ಬೀಜಕ್ಕನುಗುಣವಾಗಿ ಆವಿರ್ಭವಿಸಿದ ಸುಖ ದುಃಖ ರೂಪವಾದ ಫಲವನ್ನು ಈ ಲೋಕದಲ್ಲಿ ಕೃಷಿಕನಂತೆ ಅನುಭವಿಸುತ್ತಿರುವನು. ಕೃಷಿಕನೂ ಕೂಡಾ ಬಿತ್ತನೆಗೆ ಯೋಗ್ಯವಾದ, ರಾಗಿ, ಜೋಳ, ಮೊದಲಾದ ಬೀಜಗಳನ್ನು ಹಿಂದಿನಿಂದಲೂ ಕೂಡಿಟ್ಟುಕೊಂಡು, ಬಿತ್ತನೆ ಕಾಲದಲ್ಲಿ ಆ ಬೀಜಗಳನ್ನು ಹೊಲದಲ್ಲಿ ಚೆಲ್ಲಿ, ಅದರಿಂದುಂಟಾದ ಫಲವನ್ನು ಅನುಭವಿಸುವನಲ್ಲವೇ, ಈ ಚೇತನನೂ ಕೂಡಾ ಹಾಗೆಯೇ ಆ ಕರ್ಮಫಲಗಳನ್ನು, ಅನುಭವಿಸುತ್ತಾ ಭಗವದ್ಭಕ್ತಿಯಿಲ್ಲದೇ ತೊಳಲುವನು. ಹೀಗಾಗಲು ಕಾರಣವೇನೆಂದರೆ, ನಿನ್ನ ಅನುಗ್ರಹ ಅವನ ಮೇಲಿಲ್ಲದಿರುವುದೇ. ಆದ್ದರಿಂದ, ಈ ರೀತಿ ದುಃಖಿಸುತ್ತಲಿರುವ ಚೇತನರನ್ನು ಅನುಗ್ರಹಿಸಿ, ಅವರಲ್ಲಿ ಭಗವದ್ಭಕ್ತಿಯನ್ನುಂಟು ಮಾಡು.

ಸುಖಾಭಾಸಕ್ಷೌದ್ರಂ ವಿಷಯ ಮಧುಕೋಶಂ ಚಪಲಧೀಃ
ವಿಚಿನ್ವನ್ಜೀವೋಯಂ ಮುಹುರಪಿ ತದಾಸ್ವಾದನರತಃ
ಭವಾರಣ್ಯೇ ತಾಪತ್ರಯ ವಿವಿಧ ಹಿಂಸ್ರೈಕನಿಲಯೇ
ಭ್ರಮನ್ಕ್ಲಿಷ್ಟಸ್ತ್ವಮಿನ್ವದತ ಇಹ ತೇ ಪಾದವಿಮುಖಃ ॥18॥

ಸ್ವಾಮಿಯೇ, ಈ ಜೀವಾತ್ಮನು, ಚಂಚಲಬುದ್ಧಿಯುಳ್ಳವನಾಗಿ, ಸುಖಾಭಾಸವೆಂಬ ಜೇನುತುಂಬಿರುವ ಸ್ರಕ್ಚಂದನಾದಿ ವಿಷಯಗಳೆಂಬ ಜೇನುಗೂಡನ್ನು ಹುಡುಕುತ್ತಾ ಆ ಜೇನನ್ನು ಆಸ್ವಾದನಮಾಡಬೇಕೆಂದು ತ್ವರೆಯುಳ್ಳವನಾಗಿ, ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ ಮೂರುವಿಧ ತಾಪಗಳೆಂಬ ಕ್ರೂರಮೃಗಗಳಿಗೆ ಆವಾಸಸ್ಥಾನವಾದ ಈ ಸಂಸಾರವೆಂಬ ಗೊಂಡಾರಣ್ಯದಲ್ಲಿ ಸುತ್ತಿ ಅಲೆದಾಡುತ್ತಾ, ನಿನ್ನ

ಪಾದಾರವಿಂದಸ್ಮರಣೆಯಿಲ್ಲದೆ, ಕ್ಲೇಶಪಡುತ್ತಾ ಆ ಸುಖಾಭಾಸವೆಂಬ ಜೇನಿನಹನಿಯನ್ನು ಆಸ್ವಾದಿಸುವನು. ಹೀಗಾಗುವುದಕ್ಕೆ ನಿನ್ನ ಅನುಗ್ರಹವಿಲ್ಲದಿರುವುದೇ ಕಾರಣ.

ಬಹಿರ್ವ್ಯಾಂತಂ ಭಾಸ್ವಾನ್ಬುವಿಸೃಮರಂ ವಿಷ್ಣುಪದಗೋ
ನಿರಸ್ಯತ್ಯಾತನ್ವನ್ನಯನ ವಿಷಯಾನ್ದೃಶ್ಯನಿವಹಾನ್
ಚಿರಾದ್ಗೂಢಂ ಗಾಢಂ ಯತಿವರರವಿಸ್ತ್ವಂತರಮಸೌ
ನಿರಸ್ಯನ್ಬ್ರಹ್ಮಾಂಡಾತ್ಪಕಟಯತಿ ಬಾಹ್ಯಂಚ ವಿಷಯಂ। ।19।।

ಇದು ಆಶ್ಚರ್ಯಕರವಾದ ವಿಷಯ. ಅದೇನೆಂದರೆ, ಸೂರ್ಯನು, ವಿಷ್ಣು ಪದದಲ್ಲಿ (ಆಕಾಶದಲ್ಲಿ) ಸಂಚರಿಸುತ್ತಾ ಪ್ರಪಂಚದಲ್ಲಿ ವ್ಯಾಪಿಸಿರುವ ಕತ್ತಲೆಯನ್ನು ಹೋಗಲಾಡಿಸಿ ಈ ಬಾಹ್ಯವಾದ ಪದಾರ್ಥಗಳು ಕಣ್ಣಿಗೆ ಗೋಚರವಾಗುವಂತೆ ಮಾಡುವನು. ಈ ರಾಮಾನುಜನೆಂಬ ಸೂರ್ಯನೋ ಅಂದರೆ, ಬಹಳ ಕಾಲದಿಂದಲೂ ಒಳಗೆ ರೂಢವಾಗಿರುವ, ಗಾಢವಾದ ಅಂಧಕಾರವನ್ನು (ಅಜ್ಞಾನವನ್ನು) ಹೋಗಲಾಡಿಸಿ ಈ ಬ್ರಹ್ಮಾಂಡಕ್ಕೂ ಆಚೆ ಇರುವ ದೇಶವಿಶೇಷವನ್ನು (ಪರಮಪದವನ್ನು) ಗೋಚರಿಸುವಂತೆ ಮಾಡುವನು, ಅಂದರೆ ಚೇತನರ ಅಜ್ಞಾನಾಂಧಕಾರವನ್ನು ತೊಲಗಿಸಿ ಅವರಿಗೆ ಮೋಕ್ಷಸಾಮ್ರಾಜ್ಯವನ್ನು ಅನುಗ್ರಹಿಸುವನು, ಎಂದು ತಾತ್ಪರ್ಯ, ವಿಷ್ಣುಪದವೆಂದರೆ, ಆಕಾಶ, ಭಗವಂತನ ಪಾದಾರವಿಂದ ಇದೆರಡಕ್ಕೂ ಹೆಸರಾಗುವುದು.

ವಿಚಿತ್ರಾಮಾಯಾಯಾಃ ಪ್ರಬಲತರತಾ ಲಕ್ಷ್ಮಣಮುನೇ,
ತ್ರಯೀಂ ವ್ಯಾಕುರ್ವಾಣೈಸ್ತ್ರಯೀತಿ ತಿಮುಖಿಪುರಾಣೈಃ ಪ್ರಕಟಿತೇ ।
ಕಥಂಚಿತ್ಸನ್ಮಾರ್ಗೇ ಜಿಗಮಿಷುಮಮುಂ ಮಾಮಘಪಥೇ
ನಿಯುಂಕ್ತೇ ಸಾ ಯಸ್ಮಾಚ್ಚರಣಮಿಹ ತತ್ತೇ ಪದಯುಗಂ ।।20।।

ಲಕ್ಷ್ಮಣಮುನಿಯೇ, ''ಮಮ ಮಾಯಾ ದುರತ್ಯಯಾ,'' ಎಂಬಂತೆ ಭಗವಂತನ ಮಾಯೆಯು ಅತ್ಯಾಶ್ಚರ್ಯಕರವಾದದ್ದು. ಅದರ ಪ್ರಾಬಲ್ಯವನ್ನು ಯಾರಿಂದಲೂ ಪರಿಹರಿಸಲು ಸಾಧ್ಯವಿಲ್ಲ, ವೇದಗಳ ಸಾರಾಂಶಗಳನ್ನು

ಪ್ರಕಟಪಡಿಸುವ, ಸ್ಮೃತಿ, ಇತಿಹಾಸ ಪುರಾಣ, ಇವುಗಳಲ್ಲಿ ಹೇಳಿರುವಂತೆ, ಸನ್ಮಾರ್ಗದಲ್ಲಿ ನಡೆದುಕೊಳ್ಳಬೇಕೆಂಬ ಇಚ್ಛೆಯುಳ್ಳವನಾಗಿದ್ದಾಗ್ಯೂ, ಆ ಮಾಯೆಯು ನನ್ನನ್ನು ದುರ್ಮಾರ್ಗಕ್ಕೆ ಹೋಗುವಂತೆ ಮಾಡುತ್ತದೆ, ಆದ್ದರಿಂದ, ಶ್ರುತಿ, ಸ್ಮೃತಿ, ಇತಿಹಾಸ ಪುರಾಣಗಳಲ್ಲಿ ತಿಳಿಸಿರುವಂತೆ ನಡೆದುಕೊಳ್ಳಲು ನನಗೆ ಸಾಧ್ಯವಿಲ್ಲ. ಆದ ಕಾರಣ, ನಿನ್ನ ಅಡಿದಾವರೆಗಳೇ ನನ್ನನ್ನು ರಕ್ಷಿಸಬೇಕು. ಅಂದರೆ, ಈ ಪ್ರಕೃತಿ ಮಂಡಲದಲ್ಲಿ ವೇದಾದಿಗಳಲ್ಲಿ ಹೇಳಿರುವಂತೆ ಆಚರಿಸುವುದು ಶ್ರಮಸಾಧ್ಯ. ಸ್ಖಾಲಿತ್ಯವುಂಟಾಗಿಯೇ ಉಂಟಾಗುವುದು. ತನ್ನ ಅನುಷ್ಠಾನದಿಂದ ಸದ್ಗತಿಯು ಪ್ರಾಪ್ತವಾಗುವುದೆಂಬುದು ಅನಿಶ್ಚಿತ. ಆಚಾರ್ಯಾನುಗ್ರಹವಿದ್ದ ಪಕ್ಷದಲ್ಲಿ ಸದ್ಗತಿಯು ಸ್ವತಸ್ಸಿದ್ಧವೆಂದರ್ಥವು.

ಕಥಂ ವಾ ಕರ್ತ್ರೀ ಸ್ಯಾತ್ಪ್ರಕೃತಿರಿಹ ಚೈತನ್ಯವಿಕಲಾ
ಪುಮಾನ್ನಾನಂ ಪದ್ಮಚ್ಛದ ಇವ ವಿಲೇಪೋ ಯತಿವರ ।
ಪ್ರತಿಚ್ಛಾಯಾಬುದ್ಧಿಪ್ರಚುರಸುಖದುಃಖಾದ್ಯನುಭವಃ
ಕಥಂ ಸ್ಯಾದಿತ್ಯೇಷಾ ಭವತಿ ಕೃಪಯಾ ತೇ ನೃಷು ಮತಿಃ ॥21॥

ಸಾಂಖ್ಯಶಾಸ್ತ್ರದಲ್ಲಿ ಈ ರೀತಿ ಹೇಳಿರುವುದು, ಸತ್ವರಜಸ್ತಮೋಗುಣ ಸಾಮ್ಯಾವಸ್ಥೆಯೇ ಪ್ರಕೃತಿಯು. ಆ ಪ್ರಕೃತಿಯೇ ಕರ್ತಾ. ಚೇತನನು ಜ್ಞಾನಸ್ವರೂಪನು. ಕಮಲದೆಲೆಗೆ ನೀರು ಯಾವ ರೀತಿ ಅಂಟುವುದಿಲ್ಲವೋ ಅದೇ ರೀತಿ ಇವನಲ್ಲಿ ಯಾವ ಸುಖದುಃಖಾದಿಗಳು ಅಂಟುವುದಿಲ್ಲ. ನಿರ್ಲಿಪ್ತನು. ಆದರೆ ಈ ಚೇತನನಿಗೆ ಸುಖದುಃಖಾದ್ಯನುಭವಗಳು ಹೇಗೆಂದರೆ, ಪ್ರಕೃತಿಗಳ ಸುಖದುಃಖದ ಪ್ರತಿಬಿಂಬದ ಜ್ಞಾನದಿಂದ ಸುಖದುಃಖಾದಿಗಳ ಅನುಭವವುಂಟಾಗುವುವು ಎಂದು.

ಯತಿಶ್ರೇಷ್ಠನಾದ ರಾಮಾನುಜನೇ, ನಿನ್ನ ಕೃಪೆಯು ಯಾವ ಚೇತನನ ಮೇಲುಂಟಾಗುವುದೋ ಆ ಚೇತನನಿಗೆ ಈ ಸಾಂಖ್ಯಶಾಸ್ತ್ರದ ಸಿದ್ಧಾಂತವು ಸರಿಯಲ್ಲವೆಂಬ ಜ್ಞಾನವುಂಟಾಗುವುದು. ಅದು ಹೇಗೆಂದರೆ, ಚೈತನ್ಯವಿಲ್ಲದ ಪ್ರಕೃತಿಯು ಕರ್ತೃವಾಗಲಾರದು. ಕರ್ಮಕ್ಕನುಗುಣವಾಗಿ ಸುಖದುಃಖಗಳನ್ನು ಅನುಭವಿಸುವ ಚೇತನನಿಗೆ ಅದರ ಪ್ರತಿಬಿಂಬ ಬೀಳುವ ಅವಕಾಶವೇ ಇಲ್ಲವೆಂಬ ನಿಶ್ಚಯಜ್ಞಾನವುಂಟಾಗುವುದು.

ಭವಿಷ್ಯನ್ನಾಚಾರ್ಯೋ ಯತಿರಿತಿ ಶಠಾರೇಸ್ಸಮಭವ
ದ್ದಯಾಯಾಃ ಯಃ ಪಾತ್ರಂ ಭವವನಕುಠಾರೋಯಮಿತಿ ಯಃ ।
ಕಟಾಕ್ಷಸ್ಯಾಪ್ಯಾಸೀತ್ಪ್ರಥಿತ ಯತಸೋ ಯಾಮುನಮುನೇ
ಸ ಭೂಯಾನ್ಮೇ ಶ್ರೀಮಾನ್ಯರಣಮಿಹ ರಾಮಾನುಜಮುನಿಃ ॥22॥

ಯಾವ ಯತಿವರ್ಯನು ಮುಂದೆ ಭವಿಷ್ಯದಾಚಾರ್ಯನಾಗಿ ಅವತರಿಸುವನೆಂದು, ಶಠವೆಂಬ ವಾಯುವನ್ನು ನಿರಸನ ಮಾಡಿದ ನಮ್ಮಾಳ್ವಾರ್ರವರ ಪರಿಪೂರ್ಣ ಕಟಾಕ್ಷಕ್ಕೆ ಪಾತ್ರನಾದನೋ, ಯಾವ ಯತಿವರ್ಯನು ಈ ಸಂಸಾರವೆಂಬ ನಿಬಿಡವಾದ ಕಾಡಿಗೆ ಕೊಡಲಿಯಂತೆ ಅವತರಿಸಿರುವನು ಎಂದು ಆಳವಂದಾರ್ರವರ ಪರಿಪೂರ್ಣ ಕಟಾಕ್ಷಕ್ಕೆ ಪಾತ್ರನಾಗಿರುವನೋ ಅಂದರೆ ಈ ಸಂಸಾರವೆಂಬ ಗೊಂಡಾರಣ್ಯವನ್ನು ಕಡಿದುಹಾಕಿ ಚೇತನೋಜ್ಜೀವನವನ್ನುಂಟುಮಾಡುವನು ಎಂಬುದಾಗಿ ಆಳವಂದಾರ್ರವರು ಕಟಾಕ್ಷಿಸಿದರೋ, ಅಂಥ ಮಹಾ ಮಹಿಮೆಯುಳ್ಳ ವೋಕ್ಷಸಾವ್ರಾಜ್ಯವನ್ನು ಕೊಡುವ ಶಕ್ತಿಸಂಪತ್ತುಳ್ಳ ರಾಮಾನುಜಯತಿವರ್ಯನು ಈ ಭೂಲೋಕದಲ್ಲಿ ನನಗೆ ರಕ್ಷಕನಾಗಲಿ.

ಶ್ರುತೀನಾಂ ಸರ್ವಾಸಾಮಪಿ ಸರಸಸಾರ್ಥಕ್ಯಕಥನೈಃ
ವಿಶಿಷ್ಟಾದ್ವೈತಂ ತನ್ಮತಮಿತಿ ಭುವಿ ಖ್ಯಾಪಿತವತಃ ।
ಜಗದ್ವ್ಯಾಪ್ತಂ ಮೋಹಂ ಯತಿಕುಲಪತೇಃ ಕ್ಷಾಲಿತವತಃ
ಪದಾಂಭೋಜದ್ವಂದ್ವಂ ಮಮಚ ಹರತು ದ್ವಂದ್ವಮಚಿರಾತ್ ॥23॥

ಎಲ್ಲಾವೇದಗಳಿಗೂ, ಅಂದರೆ, ಸಗುಣಶ್ರುತಿ, ನಿರ್ಗುಣಶ್ರುತಿ, ಭೇದಶ್ರುತಿ, ಅಭೇದಶ್ರುತಿ, ಘಟಕಶ್ರುತಿ, ಈ ರೀತಿಯಾದ ಸಮಸ್ತ ಶ್ರುತಿಗಳಿಗೂ, ಸರಸವಾಗಿಯೂ, ಸಾರ್ಥಕವಾಗಿಯೂ ಶ್ರೀ ಭಾಷ್ಯವನ್ನು ಅನುಗ್ರಹಿಸಿ, ಚಿತ್ತು ಅಚಿತ್ತು ಭಗವಂತನು, ಎಲ್ಲವೂ ಸತ್ಯವೇ, ಮಿಥ್ಯಾ ಭೂತವಾದದ್ದು ಯಾವುದೂ ಇಲ್ಲ, ಚಿದಚಿಚ್ಚರೀರಕನಾದ ಶ್ರೀ ಮನ್ನಾರಾಯಣನು ಸರ್ವಶೇಷೀ, ಎಂಬುದಾಗಿ, ಶಾಸ್ತ್ರಸಂಮತವಾದ ವಿಶಿಷ್ಟಾದ್ವೈತ ತತ್ವವನ್ನು ಲೋಕದಲೆಲ್ಲಾ ಹರಡಿ, ಜಗತ್ತಿನಲ್ಲಿ ಪ್ರಸರಿಸಿರುವ ಮೋಹಾಂಧಕಾರವನ್ನು ಹೋಗಲಾಡಿಸಿದ ಶ್ರೀ ರಾಮಾನುಜಯತಿವರ್ಯರ, ಚರಣಕಮಲ ದ್ವಂದ್ವವು, ನನ್ನ ದ್ವಂದ್ವವನ್ನು ಅಂದರೆ, ದ್ವಂದ್ವಾತ್ಮಕವಾದ ಈ ಸಂಸಾರದ ಸಂಬಂಧವನ್ನು ಹೋಗಲಾಡಿಸಲಿ.

ಪ್ರಕೃತ್ಯಾ ಜೀವೋಯಂ ಪರಿವೃತತಯಾ ಧ್ವಸ್ತವಿಭವೋ
ಭವಧ್ವಾಂತೇ ಮಗ್ನಃ ಪ್ರಕೃತಿಪರಿಣಾಮಾಂಸ್ತು ವಿಷಯಾನ್ ।
ಸ್ವಭೋಗ್ಯಾನ್ಮನ್ವಾನಸ್ಸ್ಮರತಿ ನಚ ನಾರಾಯಣಪದಂ
ಕಥಂ ಮುಕ್ತೋಯಂ ಸ್ಯಾತ್ತ್ವದಮಿತಕೃಪಾಂ ಲಕ್ಷ್ಮಣ ವಿನಾ ॥24॥

ಈ ಜೀವಾತ್ಮನು ಪ್ರಕೃತಿಯಿಂದ ಪರಿವೃತನಾಗಿ ಜ್ಞಾನರಹಿತನಾಗಿ, ಈ ಸಂಸಾರವೆಂಬ ಗಾಢಾಂಧಕಾರದಲ್ಲಿ ಮುಳುಗಿ, ಆ ಪ್ರಕೃತಿಯ ಪರಿಣಾಮ ರೂಪವಾದ ಸ್ರಕ್ಚಂದನಾದಿ ವಿಷಯಗಳನ್ನೇ ತನಗೆ ಭೋಗ್ಯವೆಂದರಿತು, ಅನುಭವಿಸುತ್ತಾ, ಶ್ರೀಮನ್ನಾರಾಯಣನ ಚರಣಾರವಿಂದವನ್ನು ಸ್ಮರಿಸುವುದೇ ಇಲ್ಲ, ಹೀಗಿರುವಲ್ಲಿ, ಎಲೈ ಲಕ್ಷ್ಮಣಮುನಿಯೇ, ನಿನ್ನ ಕೃಪೆಯಿಲ್ಲದೆ, ಆ ಜೀವಾತ್ಮನು ಹೇಗೆತಾನೇ ಮೋಕ್ಷವನ್ನು ಪಡೆಯುವನು? ಪಡೆಯಲು ಸಾಧ್ಯವೇ ಇಲ್ಲ, ಅಂದರೆ, ಜ್ಞಾನರೂಪಿಯಾದ ಜೀವಾತ್ಮನಿಗೆ ಈ ಪ್ರಾಕೃತವಾದ ಶರೀರವನ್ನು ಹೊಂದಿ, ಅಜ್ಞಾನದಿಂದ ಈ ಪ್ರಾಕೃತವಿಷಯಗಳನ್ನೇ ಪರಮ ಭೋಗ್ಯವಾಗಿ ಅನುಭವಿಸುತ್ತಾ, ಭಗವಂತನಸ್ಮರಣೆಯೇ ಇಲ್ಲದಿರುವಾಗ ಹೇಗೆತಾನೇ ಮೋಕ್ಷ ಲಭಿಸೀತು? ನೀನು ಅನುಗ್ರಹಿಸಿದಪಕ್ಷದಲ್ಲಿ, ಅಂಥವನೂ ಕೂಡ ಮೋಕ್ಷ ಪಡೆಯಬಹುದು. ಎಂದು ತಾತ್ಪರ್ಯ.

ತಪಸ್ತಪ್ತಂ ತೀವ್ರಂ ನ ದೃಢನಿಯಮೋ ನೈವ ರಚಿತಃ
ಮಯಾ ದಿವ್ಯಕ್ಷೇತ್ರಾದ್ಯಟನಮಪಿ ನೈವಾಭಿಲಷಿತಂ ।
ನಚ ಸ್ನಾತಂ ತೀರ್ಥೇಷ್ವಮಿತದುರಿತಕ್ಷಾಲನಕೃತೇ
ಭವತ್ಪಾದದ್ವಂದ್ವೇ ವಿನಿಹಿತಭರೇಣಾರ್ಯವಿನುತ ॥25॥

ಜ್ಞಾನಿಗಳಿಂದ ಸ್ತುತಿಸಲ್ಪಟ್ಟ ಯತಿರಾಜ! ಕಾಯಕ್ಲೇಶರೂಪವಾದ ತಪಸ್ಸನ್ನು ಆಚರಿಸಲಿಲ್ಲ, ಮತ್ತು ಚಾಂದ್ರಾಯಣಾದಿವ್ರತನಿಯಮಗಳನ್ನು ಕೂಡಾ ಮಾಡಲಿಲ್ಲ, ಶ್ರೀರಂಗಾದಿ ದಿವ್ಯದೇಶಗಳ ಯಾತ್ರೆಯನ್ನು ಮನಸ್ಸಿನಿಂದಲೂ ಅಪೇಕ್ಷಿಸಲಿಲ್ಲ, ನನ್ನ ಅಪರಿಮಿತವಾದ ಪಾಪಗಳನ್ನು ಕಳೆದುಕೊಳ್ಳಲು, ಗಂಗಾದಿಪುಣ್ಯತೀರ್ಥಗಳಲ್ಲಿ ಸ್ನಾನವನ್ನೂ ಮಾಡಲಿಲ್ಲ,

ಹೀಗಿರಲು ಕಾರಣವೇನೆಂದರೆ, ನಿನ್ನ ಚರಣಕಮಲಯುಗಳದಲ್ಲಿ ನನ್ನ ಸಮಸ್ತಭಾರವನ್ನು ಇಟ್ಟಿರುವುದೇ, ಶ್ರೀ ರಾಮಾನುಜಯತಿವರ್ಯನ ಪಾದಕಮಲಗಳನ್ನು ಆಶ್ರಯಿಸಿದ ಮೇಲೆ, ಮೊದಲು ಹೇಳಿದ ತಪಸ್ಸೇ ಮೊದಲಾದ ಕರ್ಮಗಳಿಂದ, ಏನೂ ಪ್ರಯೋಜನವಿಲ್ಲವೆಂಬ ಭರವಸೆಯಿಂದಿರುತ್ತಲಿದ್ದೇನೆ,

ಹರೇರ್ಯಾ ಮಾಯಾ ಚಿದ್ಗಣಮಮಿತಮಾವೃತ್ಯ ನಿತರಾಂ
ಚಿರಾತ್ಸಂಸಾರಾಗ್ನಾವಪರಿಮಿತತಾಪೇ ಗ್ಲಪಯತಿ ।
ಸ್ಮರಂತಂ ತ್ವತ್ಪಾದಾವಪಸರತಿ ಸಾಪಾಸ್ಯ ಪುರುಷಂ
ವಿಚಿತ್ರಸ್ತೇ ರಾಮಾವರಜ ಮಹಿಮಾ ವಾಗತಿಗತಃ ॥26॥

ರಾಮಾನುಜಯತಿವರ್ಯ! ಭಗವಂತನ ಯಾವ ಮಾಯೆಯೊಂದುಂಟೋ ಅದು ಈ ಚೇತನ ವರ್ಗವನ್ನು, ಆವರಿಸಿಕೊಂಡು, ಚಿರಕಾಲದಿಂದಲೂ ಸಹಿಸಲಸಾಧ್ಯವಾದ ತಾಪವುಳ್ಳ ಈ ಸಂಸಾರವೆಂಬ ಬೆಂಕಿಯಲ್ಲಿ ಪಕ್ವ ಮಾಡುತ್ತಲಿದೆಯಲ್ಲವೆ? ಆದರೆ, ನಿನ್ನ ಚರಣಾರವಿಂದಗಳನ್ನು ಸ್ಮರಿಸುವ ಪುರುಷನನ್ನು ಮಾತ್ರ, ಆ ಮಾಯೆಯು ಬಿಟ್ಟು ದೂರ ತೊಲಗುವುದು. ಆದ್ದರಿಂದಲೇ, ನಿನ್ನ ಮಹಿಮೆಯು, ಅತ್ಯಾಶ್ಚರ್ಯಕರವಾದದ್ದು. ಮತ್ತು ವಾಚಾಮಗೋಚರವಾದದ್ದು ಆಚಾರ್ಯಾನುಗ್ರಹವಿದ್ದ ಪಕ್ಷದಲ್ಲಿ, ಭಗವಂತನ ಮಾಯೆ ಕೂಡಾ ಈ ಚೇತನನನ್ನು ಏನೂ ಮಾಡಲಾರದು. ಎಂದು ಅರ್ಥ.

ನ ಮೇ ಭಕ್ತಿರ್ಲಕ್ಷ್ಮೀ ಸಹಚರಪದಾಬ್ಜೇ ದೃಢತರಾ
ನಚ ಕ್ಷಾಂತಿಸ್ತ್ವಾಂತೇ ದ್ರವಿಣಗಣಸಂಪಾದನರತೇ ।
ನ ವಿಶ್ವಾಸಸ್ತ್ವಯ್ಯನ್ಹರಿಗುಣರತೇ ಭಕ್ತನಿವಹೇ
ಸಮುಜ್ಜೀವೇತ್ಪಾಪಃ ಕಥಮಿವ ಕಟಾಕ್ಷಂ ತವ ವಿನಾ ॥27॥

ಸ್ವಾಮಿಯೇ, ಶ್ರಿಯಃಪತಿಯಾದ ನಾರಾಯಣನ ಚರಣಕಮಲಗಳಲ್ಲಿನನಗೆ ದೃಢವಾದ ಭಕ್ತಿಯು ಸ್ವಲ್ಪವೂ ಇಲ್ಲ. ಯಾವಾಗಲೂ ಹಣವನ್ನು ಸಂಪಾದಿಸಬೇಕೆಂಬ ಅಪಾರ ಆಶೆಯುಳ್ಳ ಮನಸ್ಸಿನಲ್ಲಿ ಕ್ಷಮಾಗುಣವಿಲ್ಲ,

ನಿರಂತರವೂ ಭಗವಂತನ ಕಲ್ಯಾಣಗುಣಗಳನ್ನು ಅನುಭವಿಸಿ ಆನಂದಿಸುವ ಭಕ್ತರ ಸಮೂಹದಲ್ಲಿ ವಿಶ್ವಾಸವಿಲ್ಲ. ಹೀಗಿರುವ ಪಾಪಿಯಾದ ನಾನು ನಿನ್ನ ಕೃಪಾಕಟಾಕ್ಷವಿಲ್ಲದೆ, ಹೇಗೆ ತಾನೇ ಉಜ್ಜೀವಿಸುವೆನು?

ವಿಭೂತಿರ್ಲೀಲಾಖ್ಯಾ ಕಮಿತುರಪಿ ದುಗ್ಧಾಬ್ಧಿದುಹಿತುಃ
ಪ್ರವೃದ್ಧಾ ಮಾದಕ್ಷೈರ್ದುರಿತನಿಲಯೈರ್ಜಂತುನಿಕರೈಃ ।
ತ್ವಯಿ ಪ್ರಾದುರ್ಭೂತೇ ಯತಿವರ ಕೃಶೇಯಂ ಪ್ರತಿದಿನಂ
ವಿಭೂತಿರ್ನಿತ್ಯಾಖ್ಯಾ ತ್ವದ್ಭವದತಿಪುಷ್ಟಾ ಗುಣನಿಧೇ ॥28॥

ಕಲ್ಯಾಣಗುಣಪರಿಪೂರ್ಣನೇ, ರಾಮಾನುಜಯತಿವರ್ಯ! ಶ್ರೀಯಃ ಪತಿಯಾದ ಭಗವಂತನ ಈ ಲೀಲಾವಿಭೂತಿಯು, ಅಂದರೆ ಬ್ರಹ್ಮಾಂಡಾಂತರ್ಗತವಾದ ಸಮಸ್ತಲೋಕವೂ, ನನ್ನಂಥ ಯಾವಾಗಲೂ ಪಾಪಕಾರ್ಯಗಳಲ್ಲೇ ನಿರತವಾಗಿರುವ ಚೇತನಸಮೂಹಗಳಿಂದ ಪ್ರತಿದಿನವೂ ಅಭಿವೃದ್ಧವಾಗುತ್ತಲಿತ್ತು. ನೀನು ಈ ಲೋಕದಲ್ಲಿ ಅವತರಿಸಿದ ಮೇಲೆ, ಈ ಲೀಲಾವಿಭೂತಿಯು ಕ್ರಮೇಣ ಕೃಶವಾಗಲು ತೊಡಗಿತು. ನಿತ್ಯವಿಭೂತಿಯೋ ಅಂದರೆ, ನಿನ್ನ ಅನುಗ್ರಹದಿಂದ ಪ್ರವರ್ಧಮಾನವಾಗುತ್ತಲಿದೆ, ಅಂದರೆ, ಈ ರಾಮಾನುಜಯತೀಶ್ವರನು ಅವತರಿಸುವುದಕ್ಕೆ ಮೊದಲು, ಈ ಭೂಲೋಕದಲ್ಲಿ ಜನಗಳು ಪಾಪಕಾರ್ಯಗಳನ್ನೆಸಗುತ್ತಲಿದ್ದದ್ದರಿಂದ, ಲೀಲಾವಿಭೂತಿಯೇ ಬೆಳೆಯುತ್ತಲಿತ್ತು. ರಾಮಾನುಜಯತಿವರ್ಯನು ಅವತರಿಸಿದ ಮೇಲೆ, ತತ್ತ್ವೋಪದೇಶದಿಂದ ಆ ರಾಮಾನುಜನು ಎಲ್ಲರನ್ನೂ ಜ್ಞಾನಿಗಳನ್ನಾಗಿಸಿ ನಿತ್ಯವಿಭೂತಿಯಾದ ಪರಮ ಪದದಲ್ಲಿ ಅನವರತವೂ ಭಗವತ್ಕೈಂಕರ್ಯಗಳಲ್ಲಿ ನಿರತರಾಗುವಂತೆ ಮಾಡಿದನೆಂದರ್ಥವು.

ಲಭೇಯಾಹಂ ಕಂಚಿತ್ಕ್ವಚಿದಪಿ ಕದಾ ಜ್ಞಾನಿನಮಿತಿ
ಪ್ರಯತ್ನಾತ್ಸರ್ವಜ್ಞಃ ಕರಣತನುಭಿಶ್ಚಿದ್ಗಣಮಮುಂ ।
ಮುಕುಂದಸ್ಸಂಯೋಜ್ಯಾಪ್ಯನಧಿಗತವಾನೇಕಮಪಿ ತಂ
ಬಹೂಂಸ್ತಸ್ಯಾಕಾರ್ಷೀತ್ಸಪದಿ ಸುಲಭಾನ್ಹಂತ ಮಹಿಮಾ ॥29॥

ಯತಿವರ್ಯ! ಇಹಲೋಕ, ಪರಲೋಕ ಸುಖಗಳನ್ನು ದಯಪಾಲಿಸುವ ಭಗವಂತನು, ಚೇತನೋಜ್ಜೀವನಕ್ಕಾಗಿ ಕರುಣೆಯಿಂದ, ಅಸತ್ಕಲ್ಪವಾದ ಚೇತನಸಮೂಹಕ್ಕೆ ಶರೀರೇಂದ್ರಿಯಾದಿಗಳನ್ನು ಕೊಟ್ಟು, ಯಾವ ಒಬ್ಬನನ್ನಾದರೂ ಜ್ಞಾನಿಯನ್ನು, ಈ ವಿಸ್ತಾರವಾದ ಪ್ರಪಂಚದಲ್ಲಿ, ಎಲ್ಲಿಯಾದರೂ, ಈ ಮಹತ್ಕಾಲದಲ್ಲಿ, ಯಾವಕಾಲದಲ್ಲಾದರೂ, ಪಡೆಯುವೆನೇ. ಎಂದು, ಸರ್ವಜ್ಞನೂ, ಸರ್ವಶಕ್ತನೂ ಕೂಡಾ ಪ್ರಯತ್ನಪಟ್ಟು ಹುಡುಕಿದರೂ, ಒಬ್ಬ ಜ್ಞಾನಿಯನ್ನೂ ಕಾಣಲಿಲ್ಲ, ರಾಮಾನುಜ, ನೀನು ಅವತರಿಸಿ, ಜ್ಞಾನಿಗೋಸ್ಕರ ಶ್ರಮಪಡುತ್ತಲಿರುವ, ಆ ಭಗವಂತನಿಗೆ, ಅನೇಕ ಜ್ಞಾನಿಗಳನ್ನು ಸಂಪಾದಿಸಿಕೊಟ್ಟೆಯಲ್ಲವೆ? ನಿನ್ನ ಮಹಿಮೆಯು ಬಹಳ ಆಶ್ಚರ್ಯಕರವಾದದ್ದು, ಅಂದರೆ, ಆಚಾರ್ಯನಾದ ರಾಮಾನುಜಯತಿವರ್ಯನ ತತ್ವಜ್ಞಾನೋಪದೇಶದಿಂದ, ಮೂಢರಾದ ಜನರೂ ಕೂಡಾ, ಜ್ಞಾನಿಗಳಾದರು, ಎಂದರ್ಥವು.

ಸುವರ್ಣಂ ಚಿದ್ರೂಪಂ ಪ್ರಕೃತಿಖನಿಕಿಟ್ಟಾವೃತತಯಾ
ಸ್ವತಸ್ತೇಜಿಷ್ಠಂಚಾಪ್ಯವಿಮಲಮಿದಂ ಲಕ್ಷ್ಮಣಮುನೇ,
ಕದಾವಾ ಕಾರುಣ್ಯಾತ್ತೇ ಫಲಮತಿಮಪಾಸ್ಯಾತ್ರ ರಚಿತೇ
ವಿಶುದ್ಧಂ ಕರ್ಮಾಗ್ನೌ ಹರಿಪದವಿಭೂಷಾ ಚ ಭವಿತಾ **॥30॥**

ಲಕ್ಷಣಮುನಿಯೇ, ಈ ಚಿತ್ತೆಂಬ ಸುವರ್ಣವು ಸ್ವಭಾವದಿಂದಲೇ ತೇಜೋಮಯವಾಗಿದ್ದರೂ, ಈ ಪ್ರಕೃತಿಯೆಂಬ, ಖನಿಯಲ್ಲಿರುವ ಕಿಟ್ಟದಿಂದಾವೃತವಾಗಿ ತನ್ನ ತೇಜಸ್ಸನ್ನು ಹೊರಪಡಿಸದೆ, ಮಲಭೂಯಿಷ್ಠವಾಗಿರುವುದಲ್ಲದೇ? ಅಂಥಾ ಚಿತ್ತೆಂಬ ಚಿನ್ನವು, ನಿನ್ನ ಕೃಪಾಕಟಾಕ್ಷದಿಂದ, ಫಲಸಂಗ ಪರಿತ್ಯಾಗ ಪೂರ್ವಕವಾಗಿ, ಆಚರಿಸಲ್ಪಟ್ಟ ಕರ್ಮವೆಂಬ ಅಗ್ನಿಯಲ್ಲಿ ಪುಟಹಾಕಲ್ಪಟ್ಟು, ಶುದ್ಧ ಅಪರಂಜಿಯಾಗಿ, ಭಗವಂತನ ಪಾದಾರವಿಂದಕ್ಕೆ ಭೂಷಣವಾಗಿ ಯಾವಾಗ ಆಗುವುದೋ ನಾನರಿಯೇ. ಅಂದರೆ, ಜೀವಾತ್ಮನು, ಚಿನ್ನದಂತೆ ತೇಜೋಮಯ. ಈ ಪ್ರಕೃತಿಯ ಸಂಬಂಧದಿಂದ, ಅಜ್ಞಾನವೆಂಬ ಮಲದಿಂದಾವೃತವಾಗಿ, ತನ್ನ

ತೇಜಸ್ಸನ್ನು ಹೊರಪಡಿಸದೇ ಇರುವನು. ಆ ಮಲವು ಹೋಗಬೇಕಾದರೆ, ಫಲದ ಅಪೇಕ್ಷೆಯಿಲ್ಲದೆ ಕರ್ಮಗಳನ್ನು ಮಾಡಿದರೆ, ಬೆಂಕಿಯಲ್ಲಿ ಪುಟಕ್ಕೆ ಹಾಕಿದ ಚಿನ್ನದಂತೆ ತೇಜೋಮಯನಾಗುವನು. ಅನಂತರ ಪರಿಶುದ್ಧವಾದ ಚಿನ್ನದಿಂದ ಪಾದಾಭರಣವನ್ನು ಮಾಡಿ ಭಗವಂತನ ಪಾದಗಳಿಗೆ ಸಮರ್ಪಿಸುವಂತೆ, ಈ ಚೇತನನೂ ಕೂಡಾ ಅವನ ಪಾದಾಭರಣವಾಗಬಹುದು. ಭಗವಚ್ಚರಣಕ್ಕೆಂಕರ್ಯ ಮಾಡಬಹುದು ಚೇತನನು, ಹಿಂದೆ ಹೇಳಿದಂತೆ, ಆಗಬೇಕಾದರೆ, ಶ್ರೀರಾಮಾನುಜಯತಿವರ್ಯನ ಕೃಪಾನುಗ್ರಹವು ಬೇಕು ಯತಿವರ್ಯ, ಈ ರೀತಿ ನಾನು ಯಾವಾಗ ಆಗುವೆನೋ ಎಂದರ್ಥವು.

ಕುರುಕ್ಷೇತ್ರೇ ಸಾಕ್ಷಾದ್ದಿತಿಜರಿಪುಣಾ ಸಾಧು ಗದಿತಾ ।
ಮುಧಾ ಜಾತಾ ಗೀತಾಹ್ಯಕೃತನರಮೋಹಾಪಹರಣಾ ।
ಅಹೋ ಸೈವ ಶ್ರೀ ಮದ್ಯತಿವರ ಮಹಾಭಾಷ್ಯಸುಭಗಾ
ಜಗತ್ಸೇವ್ಯಾಪ್ಯಾಸೀತ್ಸಕಲನರಮೋಹಾಪಹರಣಾತ್ ॥31॥

ಗೀತಾಚಾರ್ಯನಾದ ಶ್ರೀ ಕೃಷ್ಣನು, ಕುರುಕ್ಷೇತ್ರದಲ್ಲಿ ರಣರಂಗದಲ್ಲಿ ತಾನೇ ಸಾಕ್ಷಾತ್ತಾಗಿ, ಯುದ್ಧಮಾಡುವುದಿಲ್ಲ ''ಬಂಧುಗಳ ವಧವು ದುಃಖಹೇತು, ಮತ್ತು ಪಾಪಕರ'', ಎಂದು ಶೋಕಿಸುತ್ತಿರುವ, ನರನಿಗೆ ಗೀತೆಯನ್ನು ಉಪದೇಶಿಸಿದನು. ಆದರೂ, ಅವನ ಮೋಹವು ಹೋಗಲಿಲ್ಲ, ಆ ಭಗವಂತನಿಂದ ಅನುಗ್ರಹಿಸಲ್ಪಟ್ಟ, ಅದೇ ಗೀತೆಗೆ, ಶ್ರೀರಾಮಾನುಜಯತಿವರ್ಯನು ಭಾಷ್ಯವನ್ನು ಅನುಗ್ರಹಿಸಿದ ನಂತರ ಆ ಗೀತೆಯು ಲೋಕಪೂಜ್ಯವಾಗಿ ಸಮಸ್ತ ನರರ ಮೋಹಗಳನ್ನೂ ಹೋಗಲಾಡಿಸಿದ್ದರಿಂದ, ಜಗತ್ಸೇವ್ಯವಾಯಿತು. ಅಂದರೆ, ಸಾಕ್ಷಾದ್ಭಗವಂತನು ಗೀತೆಯನ್ನು ಉಪದೇಶಿಸಿದರೂ, ಒಬ್ಬ ನರನ (ನರ ಎಂದರೆ ಅರ್ಜುನನಿಗೂ ಹೆಸರು) ಅಜ್ಞಾನವು ಹೋಗಲಿಲ್ಲ. ಅದೇ ಗೀತೆಗೆ ಆಚಾರ್ಯಸಂಬಂಧ ಒದಗಿದ ಮೇಲೆ, ಅಂದರೆ ಆ ಗೀತೆಗೆ ರಾಮಾನುಜಭಾಷ್ಯವಾದ ಮೇಲೆ, ಅನೇಕ ನರರ, ಮನುಷ್ಯರ ಮೋಹವು

ದೂರವಾದವು ಎಂದರ್ಥವು. (ಅರ್ಜುನನ ಮೋಹವು ಹೋಗಲಿಲ್ಲವೆನ್ನುವುದಕ್ಕೆ ಭಾರತದಲ್ಲಿ ಪ್ರಮಾಣವಿದೆ) ಕೇವಲ ಗೀತೆಯನ್ನು ಅನುಸಂಧಾನ ಮಾಡಿದರೆ, ಅದರ ತತ್ಪಾರ್ಥಗಳನ್ನು ಸಮೀಚೀನವಾಗಿ ಅರಿಯಲು ಸಾಧ್ಯವಾಗಲಾರದು. ಶ್ರೀಯತಿರಾಜ ರಾಮಾನುಜಾಚಾರ್ಯರ ಗೀತಾಭಾಷ್ಯವನ್ನು ಪ್ರವಚನಮಾಡಿದರೆ, ಸಮೀಚೀನವಾದ ತತ್ಪಾರ್ಥಜ್ಞಾನವುಂಟಾಗುವುದೆಂದು ತಾತ್ಪರ್ಯವು.

ಸ್ವತಂತ್ರಂ ಶ್ರೀರಾಮಂ ಭರತ ಇವ ನಾರಾಯಣಮಪಿ
ಪ್ರಪದ್ಯಾಲಬ್ಧಾಸ್ಯಾತ್ಕಲಮಿಹ ಪುಮಾನ್ಕ್ಲೇಶವಿಷಯಃ ।
ಯತೀಂದ್ರಸ್ಯ ಶ್ರೀಮಚ್ಚರಣಯುಗಲೀಂ ರಕ್ಷಕತಯಾ
ಪ್ರಪನ್ನೋ ವೈಕುಂಠೇ ಹರಿಚರಣಸೇವಾಂ ವಿತನುತೇ ॥31॥

ಭರತನು ಸಾಕ್ಷಾತ್ತಾಗಿ, ಸ್ವತಂತ್ರನಾದ ಶ್ರೀರಾಮನನ್ನು ಆಶ್ರಯಿಸಿ ''ತಾವು ಈ ಅರಣ್ಯವನ್ನು ತ್ಯಜಿಸಿ ಹಿಂತಿರುಗಿ ಅಯೋಧ್ಯೆಗೆ ದಯಮಾಡಿಸಿ ಪಟ್ಟಾಭಿಷೇಕವನ್ನು ಅಂಗೀಕರಿಸಬೇಕೆಂದು'' ಎಷ್ಟು ಪ್ರಾರ್ಥಿಸಿದರೂ ರಾಮನು ಸಮ್ಮತಿಸಲಿಲ್ಲ. ಕೇವಲ ಶ್ರೀರಾಮನ ಪಾದುಕೆಗಳಿಂದಲೇ ತೃಪ್ತನಾಗಬೇಕಾಯ್ತು. ಅದರಂತೆಯೇ ಈ ಚೇತನನು ಸಾಕ್ಷಾತ್ತಾಗಿ ಶ್ರೀಮನ್ನಾರಾಯಣನನ್ನು ಆಶ್ರಯಿಸಿದ್ದೇ ಆದರೆ, ಸ್ವತಂತ್ರನಾದ ಅವನು ಆಚಾರ್ಯ ಸಂಬಂಧವಿಲ್ಲದ ಈ ಚೇತನನನ್ನು ಅಂಗೀಕರಿಸುವುದಿಲ್ಲ. ಕ್ಲೇಶಕ್ಕೆ ಒಳಗಾಗುವನು. ಅದೇ ಚೇತನನು ಶ್ರೀರಾಮಾನುಜಯತಿವರ್ಯರ ಚರಣ ಕಮಲಗಳನ್ನು ಆಶ್ರಯಿಸಿದ ಪಕ್ಷದಲ್ಲಿ ಅವನಿಗೆ ಪರಮಪದದಲ್ಲಿ ಶ್ರೀಮನ್ನಾರಾಯಣನ ಪಾದಾರವಿಂದ ಕೈಂಕರ್ಯವು ನಿತ್ಯವಾಗಿ ಲಭಿಸುವುದು.

ನಿಜಸ್ಥಾನಂ ಗಚ್ಛನ್ರಘುಕುಲಪತಿಃ ಪ್ರಾಣನಿಕರಾ
ನನೈಷೀದ್ಭಾಸಾದೀನ್ನಿಜಪುರಗತಾನೇವ ನ ಪರಾನ್ ।
ಯತೀಂದ್ರ ತ್ವತ್ಪಾದಾಶ್ರಿತ ಜನಪದಾಬ್ಜಾಶ್ರಯವತೋ
ಽಹೋ ಮೋಕ್ಷಂ ನಿತ್ಯಂ ನಯಸಿ ಸಕಲಾಂಸ್ತೇತು ಮಹಿಮಾ ॥33॥

ಶ್ರೀರಾಮನು ತನ್ನ ಸ್ಥಾನವಾದ ಪರಮಪದಕ್ಕೆ ತೆರಳುವಾಗ ತನ್ನ ರಾಜಧಾನಿಯಾದ ಅಯೋಧ್ಯೆಯಲ್ಲಿ ವಾಸಿಸುತ್ತಿರುವ ಹುಲ್ಲು, ಇರುವೆ, ಇವೇ ಮೊದಲಾದ ಪ್ರಾಣಿಗಳನ್ನು ಸರಯೂ ನದೀಮೂಲಕ ಪರಮಪದಕ್ಕೆ ಕರೆದೊಯ್ದನು. ಇತರ ಸ್ಥಾನಗಳಲ್ಲಿರುವ ಮತ್ಯಾವ ಪ್ರಾಣಿಗಳಿಗೂ ಆ ಸಂಪತ್ತನ್ನು ಅನುಗ್ರಹಿಸಲಿಲ್ಲ. ಯತಿರಾಜ, ನೀನೋ ಅಂದರೆ ನಿನ್ನ ಚರಣಗಳನ್ನು ಆಶ್ರಯಿಸಿದ ಜನತೆಯ ಪಾದಗಳನ್ನು ಆಶ್ರಯಿಸಿದವರಿಗೂ ಮೋಕ್ಷ ಸಾಮ್ರಾಜ್ಯವನ್ನು ಕರುಣಿಸುತ್ತಲಿರುವೆ. ನಿನ್ನ ಮಹಿಮೆಯು ವಾಚಾಮಗೋಚರವಾದದ್ದು. ಇದರಿಂದ ಶ್ರೀರಾಮಾನುಜಯತಿವರ್ಯರ ಪಾದಗಳನ್ನು ಆಶ್ರಯಿಸಿದ ಶ್ರೀವೈಷ್ಣವರ ಸಂಬಂಧಿಸಂಬಂಧಿಗಳ ಮಹಿಮಾತಿಶಯದ ಪರಾಕಾಷ್ಠೆಯನ್ನು ತಿಳಿಸಿದಂತಾಯಿತು.

ನ ಕಸ್ಯಾಪ್ಯನ್ಯಸ್ಯ ಪ್ರಥಿತವಿಭವಂ ಮಂತ್ರಮತುಲಂ
ಪ್ರವಕ್ಷ್ಯಾಮೀತ್ಯೇವಂ ರಚಿತಶಪಥೋ ಮಾಸಮನದನ್ ।
ಗುರೋರ್ಗೋಷ್ಠೀಪೂರ್ಣಾತ್ಸುಚಿರಮುರರೀಕೃತ್ಯ ನಗರೇ
ತಮುಚ್ಚೈಸ್ಸರ್ವೇಷಾಂ ಧುರಿ ಜಗದಿಥಾಹೋ ತವ ಕೃಪಾ ॥34॥

ಯತಿವರ್ಯ! ಒಂದು ಮಾಸಕಾಲ ಉಪವಾಸವಿದ್ದು ಮಿತ್ತರರಿಗೆ ಯಾರಿಗೂ ಈ ರಹಸ್ಯಾರ್ಥವನ್ನು ತಿಳಿಯಪಡಿಸುವುದಿಲ್ಲವೆಂದು ಪ್ರತಿಜ್ಞೆಯನ್ನೂ ಮಾಡಿ ಗೋಷ್ಠೀಪೂರ್ಣರೆಂಬ ಗುರುಗಳಿಂದ ರಹಸ್ಯಾರ್ಥವನ್ನು ಉಪದೇಶ ಮೂಲಕ ಅರಿತು, ಆಚಾರ್ಯಾಜ್ಞಾ ಉಲ್ಲಂಘನೆಯಿಂದ ತನಗೆ ಅಧೋಗತಿಯುಂಟಾದರೂ ಆಗಲಿ, ಚೇತನರೆಲ್ಲರೂ ಉಜ್ಜೀವಿಸಬೇಕೆಂಬ ಕೃಪೆಯಿಂದ ನಗರದಲ್ಲಿ ಎಲ್ಲರಿಗೂ ತಿಳಿಯುವಂತೆ ಆ ರಹಸ್ಯವನ್ನು ಉದ್ಘೋಷಿಸಿದೆಯಲ್ಲವೇ? ನಿನ್ನ ಉದಾರವಾದ ಕೃಪೆಯನ್ನು ಎಷ್ಟೆಂದು ಬಣ್ಣಿಸೋಣ? ನೀನು ಕೃಪಾಮಾತ್ರ ಪ್ರಸನ್ನಾಚಾರ್ಯನಲ್ಲವೇ? ಆದ್ದರಿಂದಲೇ ಈ ರೀತಿ ನೀನು ಚೇತನರನ್ನು ಉದ್ಧರಿಸಿದೆ.

ಕೃತಾನಂತಾಘೋಹಂ ಧುತಭವಭಯೋಸ್ಮ್ಯದ್ಯ ನಿತರಾಂ
ಲಭೇಯಾಹಂ ಶ್ರೀಮದ್ದರಿಚರಣ ಸೇವಾಂಚ ಸತತಂ
ಮದೀಯೋಯಂ ದೀನೋ ಜನ ಇತಿ ಯತೋ ಲಕ್ಷ್ಮಣಮುನೇ
ಭವಾನಂಗೀಚಕ್ರೇ ಪರಮಕೃಪಯಾ ದುಷ್ಪಮಪಿ ಮಾಂ ॥35॥

ರಾಮಾನುಜ, ನಾನು ಅಪರಿಮಿತವಾದ ಪಾಪಮಾಡಿದ್ದಾಗ್ಯೂ ಕೂಡ ನಿಶ್ಕೇಷನಾಗಿ ಈ ಸಂಸಾರಭಯವನ್ನು ದೂರಮಾಡಿರುತ್ತೇನೆ. ಭಗವಂತನ ಪಾದಸೇವೆಯನ್ನೂ ಪಡೆಯುವೆನೆಂಬ ಭರವಸೆಯೂ ನನಗಿದೆ. ಏಕೆಂದರೆ, ದೀನನಾದ ಈ ಮನುಷ್ಯನೂ ನನ್ನವನು ಎಂದು ಪರಮಕೃಪಾಳುವಾದ ನೀನು ನನ್ನನ್ನು ದೋಷಗಳನ್ನೆಣಿಸದೆ ಅಂಗೀಕರಿಸಿರುವೆ. ಆದಕಾರಣ ನಾನು ನಿರ್ಭರನಾಗಿರುವೆನು. ನಿನ್ನ ಚರಣಾಶ್ರಿತನಾದ ನನಗೆ ಯಾವ ಭಯವೂ ಇಲ್ಲ.

ಯತೀಂದ್ರೇದಂ ಚಿತ್ರಂ ಫಲಮತಿಮಪಾಸ್ಯಾತ್ರ ವಿಧಿತಃ
ಚತುರ್ಭೇದಾನ್ಯೋಗಾನ್ಸುಚಿರಮನುತಿಷ್ಠನ್ನಪಿ ನರಃ
ಮುರಾರೇಃ ಕಾರುಣ್ಯಾದ್ಯದನುಭವತಿ ಧ್ವಸ್ತದುರಿತಃ
ತ್ವದೀಯಾಸ್ತ್ವಕ್ಲೇಶಂ ತವ ಹಿ ಕೃಷಿತಸ್ತ್ವಲು ಫಲಂ ॥36॥

ಯತಿಶ್ರೇಷ್ಠನೇ, ಫಲಸಂಗಪರಿತ್ಯಾಗಪೂರ್ವಕವಾಗಿ, ಶಾಸ್ತ್ರದಲ್ಲಿ ಹೇಳಿರುವಂತೆ, ಕರ್ಮ, ಜ್ಞಾನ, ಭಕ್ತಿ ಪ್ರಪತ್ತಿಯೆಂಬ ನಾಲ್ಕು ವಿಧವಾದ ಯೋಗಗಳನ್ನು ಅನುಷ್ಠಾನದಲ್ಲಿತಂದರೂ, ಮನುಷ್ಯನು ಭಗವಂತನ ಕೃಪೆಗೆ ಪಾತ್ರನಾಗಿ, ಪಾಪರಹಿತನಾಗಿ, ಯಾವುದೊಂದು ಸುಖ ವಿಶೇಷವನ್ನು ಅನುಭವಿಸುವನೋ, ಅದೇ ಸುಖವಿಶೇಷವನ್ನು, ನಿನ್ನ ಪಾದಾಶ್ರಿತರಾದವರು, ಹಿಂದೆ ಹೇಳಿದ ನಾಲ್ಕು ವಿಧವಾದ ಯೋಗಗಳ ಕ್ಲೇಶವಿಲ್ಲದೇ, ನಿನ್ನ ಕೃಪೆಯಿಂದ ಅನುಭವಿಸುವರು, ಇದೀಗ ಆಶ್ಚರ್ಯ,

ಕೃತೇ ದುಷ್ಕರ್ಮಣ್ಯಪ್ಯಹಹ ಮಮ ರಾಮಾನುಜಮುನೇ
ನ ಪಶ್ಚಾತ್ತಾಪೋಭೂದ್ಬತ ನ ವಿರತೋ ದುಷ್ಟಚರಿತಾತ್ ।
ಸಕೃತ್ತ್ವತ್ಪಾದಾಬ್ಜದ್ವಯಮನನಮಪ್ಯನ್ಯಮನಸಾ
ಪ್ಯನಾಸಕ್ಯಾ ವಾ ಯತ್ಕೃತಮಪಿ ತದುತ್ತಾರಯತು ಮಾಂ ॥37॥

ರಾಮಾನುಜಯತಿವರ್ಯ, ಅನೇಕ ಕೆಟ್ಟ ಕೆಲಸಗಳನ್ನು ನಾನು ಮಾಡಿರುವೆನು ಆದರೂ ಒಂದಾವರ್ತಿ, ಯಾವುದೋ ಮನಸ್ಸಿನಿಂದ, ಆಸಕ್ತಿಯಿಲ್ಲದೆಯೇ, ನಿನ್ನ ಚರಣಕಮಲಮನನವನ್ನು ಮಾಡಿದ್ದ ಪಕ್ಷದಲ್ಲಿ ಅದೇ ನನ್ನನ್ನು ಉದ್ಧರಿಸಲಿ.

ಗುಣೈಸ್ತೈಶ್ಯಾಂ ತ್ಯಾದ್ಯೈರ್ವಿರಹಿತಮನಾ ಅಪ್ಯಹಮಹೋ
ಭವದ್ಭಕ್ತಾಕಲ್ಪೈರ್ನಟ ಇವ ವಶೀಕೃತ್ಯ ಜನತಾಂ ।
ಸದಾಸ್ಮದ್ರವ್ಯಾರ್ಥೀ ಕುಟಿಲಹೃದಯೋ ಲಕ್ಷ್ಮಣಮುನೇ
ಭವತ್ಪಾದಚ್ಛಾಯಾ ಶರಣಮಿಹ ನಾನ್ಯಾ ಮಮ ಗತಿಃ ॥38॥

ಲಕ್ಷ್ಮಣಮುನಿಯೇ, ಶಾಂತ್ಯಾದಿಗುಣಗಳು ಸ್ವಲ್ಪವೂ ನನ್ನ ಹೃದಯದಲ್ಲಿಲ್ಲ. ಆದರೂ, ನಿನ್ನ ಭಕ್ತನಂತೆ ವೇಷಧಾರಿಯಾಗಿ, ನಾಟಕದಲ್ಲಿನಟನಂತೆ ಎಲ್ಲರ ಮನಸ್ಸನ್ನು ಆಕರ್ಷಿಸುತ್ತಿರುವೆನು. ಕುಟಿಲ ಹೃದಯನಾದ ನನಗೆ, ನಿನ್ನ ಭಕ್ತನಂತೆ ವೇಷವು, ದ್ರವ್ಯಾರ್ಜನೆಗಾಗಿಯೇ. ಆದಕಾರಣ, ನಿನ್ನ ಪಾದಚ್ಛಾಯೆಯೇ ನನಗೆ ರಕ್ಷಕವು. ಇಲ್ಲಿ ಬೇರೇ ಗತಿಯಿಲ್ಲ. ಈ ರೀತಿ ಪಾಪಿಯಾದ ನನ್ನನ್ನು ನೀನೇ ಕರುಣೆಯಿಂದ ಉದ್ಧರಿಸಬೇಕೇ ಹೊರತು ಬೇರೆ ಗತಿಯಿಲ್ಲವೆಂದು ತಾತ್ಪರ್ಯ.

ಮಂದಸ್ಮಿತೋಜ್ವಲಕಪೋಲತಲೋದ್ಗತಾಂತ
ರ್ಗಾಂಭೀರ್ಯ ಸಿಂಧು ಪೃಷತಂ ಕಮಲಾಯತಾಕ್ಷಂ ।
ಶ್ವೇತೋರ್ಧ್ವಪುಂಡ್ರ ಹೃತಭಕ್ತಭವಜ್ವರಂ ಮೇ
ಚಕ್ಷುಷ್ಪತೇ ಯತಿಪತೇರ್ಮುಖಮಾವಿರಸ್ತು ॥39॥

ಮಂದಹಾಸದಿಂದ ಪ್ರಕಾಶಿಸುವ ಕಪೋಲ ತಲದಲ್ಲಿ, ಹೃದಯದಲ್ಲಿ ಅಡಗಿರುವ ಗಾಂಭೀರ್ಯ ಸಮುದ್ರ ಬಿಂದುಗಳು ಚಿಮ್ಮಿ ಹೊರಹೊಮ್ಮುತ್ತಲಿವೆ ಕಮಲದೋಪಾದಿಯಲ್ಲಿ ವಿಸ್ತಾರವಾದ ಕಣ್ಣುಗಳಿಂದ ಮನೋಹರವಾಗಿದೆ, ಲಲಾಟದಲ್ಲಿ ಧರಿಸಿರುವ ಶ್ವೇತೋರ್ಧ್ವಪುಂಡ್ರವು, ಆಶ್ರಿತರಭವಸಂತಾಪವನ್ನು ಪರಿಹರಿಸುತ್ತಲಿದೆ. ಈ ರೀತಿಯಾದ ಯತಿರಾಜನಮುಖಕಮಲವು, ನನ್ನ ಕಣ್ಣಮುಂದೆ ಆವಿರ್ಭವಿಸಲಿ,

ಚಿದಚಿತ್ತತ್ತ್ವೇ ಸತ್ಯೇ
ಶ್ರೀಮನ್ನಾರಾಯಣೋಪಿ ತಚ್ಛೇಷೀ ।
ಪ್ರಖ್ಯಾಪಯನ್ನಿವೇತ್ಥಂ
ಜಯತಿ ಸ ದಂಡತ್ರಯೇಣ ಯತಿರಾಜಃ ॥40॥

ಚಿತ್ತು ಅಚಿತ್ತು ಎರಡೂ ಸತ್ಯವೇ, ಮಿಥ್ಯೆಯಲ್ಲ. ಶ್ರಿಯಃ ಪತಿಯಾದ ಶ್ರೀಮನ್ನಾರಾಯಣನು ಮೇಲೆಹೇಳಿದ ಎರಡಕ್ಕೂ ಶೇಷಿಯು, ಎಂದು ಮೂರು ದಂಡಗಳುಳ್ಳ ಧ್ವಜಪಟವನ್ನು ಕೈಯಿಂದ ಎತ್ತಿ ಹಿಡಿದು ತಮ್ಮ ಸಿದ್ಧಾಂತವು ಜಗದ್ವಿಖ್ಯಾತವಾಗುವಂತೆ ತೋರಿಸುತ್ತಲಿರುವ ಶ್ರೀರಾಮಾನುಜಯತಿರಾಜನು ಸರ್ವೋತ್ಕೃಷ್ಟನಾಗಿ ಪ್ರಕಾಶಿಸುತ್ತಿರುವನು.

ಸಂಸಾರದಾವಾನಲದಹ್ಯಮಾನಾ
ನ್ಮರ್ತ್ಯಾನನುಕ್ರೋಶಸುಧಾಪ್ರವರ್ಷೈಃ ।
ಆಪ್ಯಾಯಯತ್ಯಾಶ್ರಿತ ವತ್ಸಲೋ ಯಃ
ತಸ್ಮೈ ಸದಾ ಮಂಗಲಮಾವಿರಸ್ತು ॥41॥

ಸಂಸಾರವೆಂಬ ಕಾಡುಗಿಚ್ಚಿನ ಮಧ್ಯದಲ್ಲಿ ಬೆಂದುಹೋಗುತ್ತಿರುವ ಮನುಷ್ಯರನ್ನು ತನ್ನ ಕೃಪಾಮೃತ ವರ್ಷದಿಂದ, ಆಪ್ಯಾಯನಗೊಳಿಸುತ್ತಿರುವ ಆಶ್ರಿತವತ್ಸಲನಾದ ರಾಮಾನುಜಯತಿವರ್ಯನಿಗೆ ಸರ್ವಕಾಲದಲ್ಲೂ ಮಂಗಲವಾಗಲಿ.

ಯದ್ದಿವ್ಯಪಾದ ಸರಸೀರುಹಮಾಕಲಯ್ಯ
ಚಿತ್ತೇತ್ಯಜಂತಿ ಚ ಭಯಂಕರರೌರವಾದೀನ್ ।
ಮರ್ತ್ಯಾಃ ಪ್ರಮೋದ ಮತಿವಾಗ್ವಿಭವಂ ಲಭಂತೇ
ತಸ್ಮೈ ಯತೀಂದ್ರ ಗುರವೇ ಶುಭಮಸ್ತುಭ್ಯಂ ॥42॥

ಮನುಷ್ಯರು, ಯಾವ ಯತಿರಾಜನ ಪಾದಾರವಿಂದಗಳನ್ನು ಮನಸ್ಸಿನಲ್ಲಿ ಧ್ಯಾನ ಮಾಡಿ, ಭಯಂಕರವಾದ ರೌರವಾದಿ ನರಕಗಳನ್ನು ದೂರಮಾಡುವರೋ, ಮತ್ತು ವಾಚಾಮಗೋಚರವಾದ

ಆನಂದಾತಿಶಯವನ್ನು ಪಡೆಯುವರೋ, ಅಂತಹ ರಾಮಾನುಜಯತಿರಾಜನಿಗೆ ಮಂಗಲವಾಗಲಿ,

ಯೇನ ವೈಕುಂಠಸಮತಾಮವಾಪ ಯದುಭೂಧರಃ
ತಸ್ಮೈ ಶೇಷಾವತಾರಾಯ ಯತಿರಾಜಾಯ ಮಂಗಲಂ ॥43॥

ಯಾವ ರಾಮಾನುಜಯತಿವರ್ಯನಿಂದ, ಯದುಶೈಲವು (ತಿರುನಾರಾಯಣಪುರವು) ವೈಕುಂಠಕ್ಕೆ ಸಮಾನವಾಯಿತೋ, ಅಂಥ ಶೇಷಾವತಾರಿಯಾದ ಯತಿರಾಜನಿಗೆ ಮಂಗಲವಾಗಲಿ.

ಯಸ್ಮಿನ್ನವಾಪ ಶಿಷ್ಯತ್ವಂ ಶ್ರೀನಿವಾಸೋ ಜಗದ್ಗುರೌ ।
ರಾಮಪ್ರಿಯೋಪಿ ಪುತ್ರತ್ವಂ ತಸ್ಮೈ ಸ್ಯಾನ್ನಿತ್ಯಮಂಗಲಂ ॥44॥

ಯಾವ ಜಗದ್ಗುರುವಾದ ರಾಮಾನುಜಯತೀಶ್ವರರನ್ನು ಆಶ್ರಯಿಸಿ, ಶ್ರೀನಿವಾಸನು, ಅವರಿಗೆ ಶಿಷ್ಯನಾದನೋ, ಹಾಗೆಯೇ, ರಾಮಪ್ರಿಯನಾದ ಸಂಪತ್ಕುಮಾರನೂ ಕೂಡಾ, ಶ್ರೀರಾಮಾನುಜಯತೀಂದ್ರನಿಗೆ ಪುತ್ರನಾದನೋ ಅಂಥಾ ಮಹಾಮಹಿಮೆಯುಳ್ಳ ರಾಮಾನುಜಸಂಯಮಿ ಸಾರ್ವಭೌಮನಿಗೆ, ನಿತ್ಯಮಂಗಳವಾಗಲಿ.

ಯತ್ಕೂರನಾಥ ಮುಖ ಶಿಷ್ಯಗಣಾಂಚಿತಂ ಯ
ದ್ರಾಜಾತ್ಮಜಾಗತಪಿಶಾಚವಿಮೋಚಕಂ ಚ ।
ಯನ್ನ್ಯಾಸಮಾತ್ರಸುಪವಿತ್ರಿತದಕ್ಷಿಣಾಶಂ
ತಸ್ಮೈ ಯತೇಃ ಪದಯುಗಾಯ ಸದಾಸ್ತು ಭದ್ರಂ ॥45॥

ಕೂರತ್ತಾಳ್ವಾರ್ರೇ ಮೊದಲಾದ ಮಹಾ ಜ್ಞಾನಿಗಳು, ಯಾವ ಪಾದಾರವಿಂದಗಳನ್ನು ಆಶ್ರಯಿಸಿ, ಅರ್ಚಿಸಿದರೋ, ಯಾವ ಪಾದವುರಾಜನ ಮಗಳಲ್ಲಿ ಆವರಿಸಿದ್ದ ಪಿಶಾಚಿಯನ್ನು ಉಚ್ಚಾಟನೆಮಾಡಿತೋ, ಯಾವ ಪಾದನ್ಯಾಸಮಾತ್ರದಿಂದಲೇ ಈ ದಕ್ಷಿಣ ದಿಕ್ಕು ಪವಿತ್ರವಾಯಿತೋ, ಅಂಥ ರಾಮಾನುಜಯತಿವರ್ಯನ ಪಾದಾರವಿಂದಗಳಿಗೆ ಮಂಗಲವಾಗಲಿ,

ಯಃ ಪಠತಿ ಪ್ರತಿದಿನಮ
ಪ್ಯಮೃತಾಧಿರೋಹಿಣೀಮೇನಾಂ ।
ಅಧಿರೋಹತಿ ಸತು ಧೀಮಾ
ನ್ರಾಮಾನುಜಾಂಘ್ರಿ ಭಕ್ತಿಸೋಪಾನಂ ॥46॥

ಯಾವನು ಪ್ರತಿನಿತ್ಯವೂ, ಈ ಅಮೃತಾಧಿರೋಹಿಣಿಯನ್ನು ಅನುಸಂಧಿಸುವನೋ – ಅಮೃತ ಎಂದರೆ ಮೋಕ್ಷ , ಅಧಿರೋಹಿಣೀ ಎಂದರೆ ಅದಕ್ಕೆ ಸೋಪಾನಗಳು. ಅಂದರೆ, ಈ ರಾಮಾನುಜಯತಿರಾಜನ ವಿಷಯಕನಾದ ಒಂದೊಂದು ಶ್ಲೋಕವೂ, ಒಂದೊಂದು ಸೋಪಾನದಂತೆ ಆದ್ದರಿಂದ,ಈ ಅಮೃತಾಧಿರೋಹಿಣಿಯನ್ನು ಅನುಸಂಧಾನ ಮಾಡಿದರೆ, ಅನಾಯಾಸವಾಗಿ, ಸೋಪಾನಗಳನ್ನು ಹತ್ತಿ ಬೆಟ್ಟವನ್ನು ಸೇರುವಂತೆ, ಮೋಕ್ಷವನ್ನು ಹೊಂದಬಹುದು, ಎಂದು ತಾತ್ಪರ್ಯ. ಅವನು ಜ್ಞಾನಿಯಾಗಿ, ಶ್ರೀರಾಮಾನುಜಯತಿವರ್ಯನ ಪಾದಾರವಿಂದ ಭಕ್ತಿಸೋಪಾನವನ್ನು ಹತ್ತುವನು,

ರಾಮಾನುಜಾಂಘ್ರಿಪ್ರವಣೋ ಜಗೂವಕುಲಭೂಷಣಃ ।
ತದಂಘ್ರಿಪಂಕಜೇ ಭಕ್ತ್ಯಾನ್ಯಧಾದೇನಾಂ ಸ್ತವಸ್ರಜಂ ॥47॥

ಶ್ರೀರಾಮಾನುಜಯತಿರಾಜರ ಪಾದಾರವಿಂದಗಳಲ್ಲಿ ಅಸಕ್ತನಾದ ಮನಸ್ಸುಳ್ಳ ಜಗೂವಕುಲಭೂಷಣನು, ಭಕ್ತಿಪುರಸ್ಸರವಾಗಿ, ಈ ಸ್ತೋತ್ರ ಮಾಲಿಕೆಯನ್ನು, ಅವನ ಪಾದಾರವಿಂದಗಳಿಗೇ, ಅರ್ಪಿಸಿ ಧನ್ಯನಾದನು.

ಇತಿ ಶ್ರೀ ಬಾಲಧನ್ವಿಜಗೂವಕುಲಭೂಷಣ
ಪ್ರಣೀತವಾದ ಅಮೃತಾಧಿರೋಹಿಣೀ
ಸಮಾಪ್ತ.

॥ ಶ್ರೀಃ ॥

ಶುಭಮಸ್ತು

ಶ್ರೀಮತೇ ರಾಮಾನುಜಾಯ ನಮಃ

ಪ್ರಪನ್ನವಾಣೀ

ಶಾಂತ್ಯಾದಿಗುಣಸಂಪೂರ್ಣಂ ಯತಿರಾಟ್ಪಾದುಕಾತ್ಮಕಂ
ಜ್ಞಾನ ವೈರಾಗ್ಯ ಗಂಭೀರಂ ವಂದೇ ದಾಶರಥಿಂ ಗುರುಂ ॥1॥

ಶಮದಮಾದಿಸದ್ಗುಣಗಳಿಂದ ಪರಿಪೂರ್ಣರಾಗಿಯೂ, ಯತಿರಾಜ ಭಗವದ್ರಾಮಾನುಜರ ಪಾದುಕಾಸ್ವರೂಪರಾಗಿಯೂ, ಜ್ಞಾನವೇನು, ವೈರಾಗ್ಯವೇನು, ಇವುಗಳಿಂದ ಗಂಭೀರಸ್ವಭಾವವುಳ್ಳವರಾಗಿಯೂ ಇರುವ, ಗುರುಗಳಾದ, ದಾಶರಥಿಯನ್ನು (ಮುದಲ್ಯೆಯಾಂಡಾನ್) ನಮಸ್ಕರಿಸುವೆನು.

ತ್ವತ್ಕೃಪಾಸಿಂಧು ಮಗ್ನಸ್ಯ ಮಮ ನಾಥ ಜಗತ್ಪತೇ ।
ಕಾ ಭೀತಿರ್ಭವಪಾಥೋಧೇಃ ಪಾಣಿಮುದ್ಧೃತ್ಯ ರಕ್ಷಸಿ ॥2॥

ಸರ್ವಜಗತ್ಸ್ವಾಮಿಯಾದ, ಶ್ರಿಯಃಪತಿಯೇ, ನಿನ್ನ ಕರುಣೆಯೆಂಬ, ಅಮೃತ ಸಾಗರದಲ್ಲಿ ಮುಳುಗಿರುವ ನನಗೆ, ಈ ಸಂಸಾರ ಸಮುದ್ರದಿಂದ, ಏನೂ ಭಯವಿಲ್ಲ. ನೀನು ಕೈಹಿಡಿದು ಮೇಲಕ್ಕೆತ್ತಿ ರಕ್ಷಿಸುತ್ತೀಯೆಂಬ ಭರವಸೆಯಿದೆ,

ಸುಧಾಂಶುಕರಶೀತೇನ ಕಟಾಕ್ಷೇಣ ಸದಾ ಹರೇ ।
ಸಿಂಚ ಮಾಂ ಭವಕಾಂತಾರೇ ಪರ್ಯಟಂತಂ ಶ್ರಿಯಃಪತೇ ॥3॥

ಆಶ್ರಿತರ ತಾಪಗಳನ್ನು ಪರಿಹರಿಸುವ , ಶ್ರಿಯಃ ಪತಿಯೇ, ಚಂದ್ರನ ಕಿರಣಗಳಂತೆ ಶೀತಲವಾದ ಕಟಾಕ್ಷದಿಂದ, ಈ ಸಂಸಾರವೆಂಬ ಗಹನವಾದ ಅರಣ್ಯದಲ್ಲಿ ಅಲೆದಾಡುತ್ತಿರುವ ನನ್ನನ್ನು ನೀನು ಸರ್ವದಾ ನೋಡಿ ರಕ್ಷಿಸು.

ವೇದಾಧ್ಯಯನ ಸಕ್ತೋಹಂ ನೈವ ಕರ್ಮರತೋ ನ ಚ ।
ತಪೋ ನಿಷ್ಠಶ್ಚ ನೈವಾಹಂ ತ್ವತ್ಕೃಪಾಮಾತ್ರ ಭಾಜನಂ ॥4॥

ನಾನು ವೇದಾಧ್ಯಯನ ಮಾಡುವುದರಲ್ಲಿ ಆಸಕ್ತನಾಗಿಲ್ಲ,

ವೇದವಿಹಿತವಾದ ಕರ್ಮಗಳನ್ನೂ ಮಾಡುತ್ತಿಲ್ಲ, ಕಾಯಕ್ಲೇಶರೂಪವಾದ, ತಪೋ ನಿಷ್ಠನೂ ಅಲ್ಲ, ನಿನ್ನ ಕೃಪಾಮಾತ್ರಕ್ಕೆ ಪಾತ್ರನಾಗಿರುವೆನು.

ತ್ವತ್ಕೃಪಾ ಮಯಿ ನ ಸ್ಯಾಚ್ಚೇನ್ಮನುಷ್ಯತ್ವಂ ಕಥಂ ಭವೇತ್ ।
ತತ್ರಾಪಿ ವಿಪ್ರಭಾವಶ್ಚ ಸತ್ಕುಲೀನತ್ವಮಪ್ಯಹೋ ॥5॥

ನಿನ್ನ ಕರುಣಾಕಟಾಕ್ಷವು ನನ್ನ ಮೇಲಿಲ್ಲದ ಪಕ್ಷದಲ್ಲಿ ನಾನು ಮನುಷ್ಯನಾಗಿ ಹೇಗೆ ತಾನೆ ಜನಿಸುತ್ತಿದ್ದೆ? ಅದರಲ್ಲೂ ಬ್ರಾಹ್ಮಣನಾಗಿ, ಅದರಲ್ಲೂ ಸತ್ಕುಲಪ್ರಸೂತನಾಗುತ್ತಿದ್ದೆ? ''ದುರ್ಲಭೋ ಮಾನುಷೋ ದೇಹಃ '' ಎಂಬಂತೆ ಮನುಷ್ಯ ಶರೀರವುಂಟಾಗುವುದೇ ದುರ್ಲಭವಲ್ಲವೇ? ನಿನ್ನ ಕರುಣಾ ಕಟಾಕ್ಷದಿಂದ ನನಗೆ ಈ ಸಂಪತ್ತೆಲ್ಲಾ ಉಂಟಾಯಿತು.

ಸದಾ ಕುಕ್ಷಿಂ ಭರೇರತ್ರ ಶಿಶುವತ್ಪಶುವಚ್ಚ ಹಾ ।
ಕುತೋ ಜ್ಞಾನಂ ಕುತೋ ಭಕ್ತಿರ್ಮಮ ನಾಥ ಭವತ್ಪದೇ ॥6॥

ಸ್ವಾಮಿಯೇ, ಅನವರತವೂ ಈ ಭೂಲೋಕದಲ್ಲಿ ಮಕ್ಕಳಿನಂತೆಯೂ ಪಶುವಿನಂತೆಯೂ, ಉದರಪೂರಣದಲ್ಲೇ ಆಸಕ್ತನಾದ ನನಗೆ, ನಿನ್ನ ಪಾದಾರವಿಂದದಲ್ಲಿ ಜ್ಞಾನವು ಹೇಗೆ ತಾನೇ ಉಂಟಾದೀತು? ಭಕ್ತಿಯೂ ಸಹ ಹೇಗೆ ತಾನೇ ಉಂಟಾದೀತು.

ನಸ್ಯಾಚ್ಚೇತ್ತ್ವತ್ಕೃಪಾ ನಾಥ ಮತ್ಕರ್ಮ ಜ್ಞಾನ ಭಕ್ತಯಃ ।
ನೈವಸ್ಯುಃ ಕಾರ್ಯಕಾರಿಣ್ಯಸ್ತ್ವಯಿ ನ್ಯಸ್ತ ಭರೋಸ್ಮ್ಯತಃ ॥7॥

ಸ್ವಾಮಿಯೇ ನಿನ್ನ ಕರುಣೆಯಿಲ್ಲದ ಪಕ್ಷದಲ್ಲಿ ನಾನು ಆಚರಿಸುವ ಕರ್ಮ ಜ್ಞಾನ, ಭಕ್ತಿಗಳು, ಪ್ರಯೋಜನಕಾರಿಯಾಗುವುದಿಲ್ಲ, ಆದ್ದರಿಂದಲೇ, ನನ್ನ ಸಮಸ್ತಭಾರವನ್ನೂ, ನಿನ್ನಲ್ಲಿಇಟ್ಟಿರುವೆನು,

ವಿಶಾಲೇ ಭವಪಾಥೋಧೌ ಮೀನಕಲ್ಪಶ್ಚಲಾಚಲಃ
ಚರನ್ನಾನ್ಯಮಿತೋ ಭೋಗ್ಯಂ ಲೋಕಂ ಜಾನಾಮಿ ಮಾಧವ ॥8॥

ಶ್ರೀಯಃ ಪತಿಯೇ, ವಿಸ್ತಾರವಾದ ಈ ಭವಸಾಗರದಲ್ಲಿ ಮೀನಿನಂತೆ, ಚಂಚಲನಾಗಿ ಸಂಚರಿಸುತ್ತಾ, ಈ ಲೋಕಕ್ಕಿಂತಲೂ ಭೋಗ್ಯವಾದ ಬೇರೇ ಲೋಕವುಂಟೆಂದು ನಾನು ಅರಿತಿಲ್ಲ

ಜಾತಸ್ಯ ಹಿ ಧ್ರುವೋ ಮೃತ್ಯುರಿತಿ ಜ್ಞಾತ್ವಾಪ್ಯಹಂತಯಾ ।
ಬಲವಾನ್ಮೇಮ ಬಂಧೋ ಮೇ ಶರೀರೇ ಸ್ನಿಗ್ಧತಾಚ್ಯುತ ॥9॥

ಅಚ್ಯುತನೇ, ಇಲ್ಲಿ ಜನಿಸಿದವನಿಗೆ ಮೃತ್ಯುವು ಸ್ವತಸ್ಸಿದ್ಧವೆಂದು, ಅರಿತಿದ್ದರೂ, ಅಹಂಕಾರದಿಂದ, ಈ ಹೇಯವಾದ ಶರೀರದಲ್ಲಿ ನನಗೆ ಪ್ರೇಮವು ಪ್ರಬಲವಾಗಿದೆ, ಇದು ಆಶ್ಚರ್ಯವಲ್ಲವೇ?

ಅಥವಾ ಯುಕ್ತಮೇವಾಸ್ಮಿನ್ಶರೀರೇ ಪ್ರೇಮಬಂಧನಂ ।
ತ್ವನ್ನಾಮಕೀರ್ತನ ಧ್ಯಾನಮನನಾಸ್ಪದಮತ್ರಯತ್ ॥10॥

ಅಥವಾ ಈ ಶರೀರದಲ್ಲಿ ಪ್ರೇಮವಿರುವುದು, ನ್ಯಾಯವೇ. ಏತಕ್ಕೆಂದರೆ ಈ ಶರೀರವಿದ್ದ ಪಕ್ಷದಲ್ಲಿ ನಿನ್ನ ನಾಮಕೀರ್ತನ, ನಿನ್ನ ನಾಮಧ್ಯಾನ, ನಿನ್ನ ನಾಮಮನನ, ಇವುಗಳನ್ನು ಮಾಡಬಹುದಲ್ಲವೇ?

ಪಾಪಕೃನ್ನರಕಂ ಯಾತಿ ಪುಣ್ಯಕೃತ್ಸ್ವರ್ಗ ವೈಭವಂ ।
ಉಭಯತ್ರ ಭವನ್ನಾಮ ಕೀರ್ತನಾವಸರೋ ನಹಿ ॥11॥

ಪಾಪಕಾರ್ಯ ಮಾಡಿದವನು, ನರಕವನ್ನು ಹೊಂದುವನು, ಪುಣ್ಯ ಕಾರ್ಯ ಮಾಡಿದವನು, ಸ್ವರ್ಗದಲ್ಲಿ ಸುಖವನ್ನನುಭವಿಸುವನು. ಅಂತೂ, ನರಕಸ್ವರ್ಗಗಳಲ್ಲಿ ನಿನ್ನ ನಾಮಕೀರ್ತನ ಮಾಡಲವಕಾಶವಿಲ್ಲ ಆದ್ದರಿಂದ, ಈ ಭೂಲೋಕದಲ್ಲೇ , ಈ ಮನುಷ್ಯ ಶರೀರದಲ್ಲೇ, ನಿನ್ನ ನಾಮಗಳ ಕೀರ್ತನ, ಧ್ಯಾನ ಮನನಾದಿಗಳನ್ನು ಮಾಡಬಹುದು. ಆದ್ದರಿಂದಲೇ ಈ ಶರೀರದಲ್ಲಿ ಪ್ರೇಮವು ನ್ಯಾಯವಾಗಿದೆ.

ವೈರಾಗ್ಯವರ್ಷಿ ವಾಗ್ಮಿತ್ವಂ ಜಿಹ್ವಾಯಾಂ ಪರಿಜೃಂಭತೇ ।
ಕೃತ್ಯತೋ ಲೇಶ ಮಾತ್ರಂ ತು ನಾಸ್ತಿ ನಾರಾಯಣಾತ್ಮನಿ ॥12॥

ಶ್ರೀಮನ್ನಾರಾಯಣನೇ, ನನ್ನ ನಾಲಿಗೆಯಲ್ಲಿ ಅನವರತವೂ ವೈರಾಗ್ಯದ ಸುರಿಮಳೆಯನ್ನು ಸುರಿಸುವ, ವಾಗ್ಮೈ ಖರಿಯು, ವೃದ್ಧಿಹೊಂದುತ್ತಲಿದೆ. ಆದರೆ ನನ್ನ ಮನಸ್ಸಿನಲ್ಲಿ ಆ ವೈರಾಗ್ಯವನ್ನು ಕಾರ್ಯರೂಪಕ್ಕೆ ತರಬೇಕೆಂಬ ಆಶೆಯು, ಲೇಶಮಾತ್ರವೂ ಇಲ್ಲ.

ಕಾಮಃ ಕಾಮಂ ವಶೀಕೃತ್ಯ ಪ್ರಪೀಡಯತಿ ಮಾಂ ಹರೇ ।
ಕೃತ್ಯಾಕೃತ್ಯ ವಿವೇಕಾಂಧಂ ತನೋತಿ ಕ್ರೋಧ ರಾಕ್ಷಸಃ ॥13॥

ಹರಿಯೇ, ಕಾಮವು, ತನ್ನ ಇಚ್ಛೆಯಂತೆ ನನ್ನನ್ನು ಸ್ವಾಧೀನಪಡಿಸಿಕೊಂಡು

ಪೀಡಿಸುತ್ತಲಿದೆ. ಕೋಪವೆಂಬ ರಾಕ್ಷಸನು, ನನ್ನನ್ನು ಕೃತ್ಯಾಕೃತ್ಯ ವಿವೇಕವನ್ನು ನಾಶಮಾಡಿ ಕುರುಡನನ್ನಾಗಿಸುತ್ತಲಿದೆ.

ಲೌಭ್ಯಾತ್ತವ ಸಪರ್ಯಾಯೈ ನಹಿ ಕಾಕಣಿಕಾಮಪಿ ।
ದದಾಮಿ ದಾನವಿಷಯೇ ಕಾ ಕಥಾ ಕಾಮಿತಾರ್ಥದ ॥14॥

ಇಷ್ಟಾರ್ಥಗಳನ್ನು ಕರುಣಿಸುವ ಶ್ರಿಯಃ ಪತಿಯೇ, ನಾನು ಲೋಭದಿಂದ ನಿನ್ನ ಆರಾಧನೆಗೂ ಕೂಡ, ಒಂದು ಬಿಡಿಗಾಸನ್ನೂ ಕೊಡುತ್ತಿಲ್ಲ. ಹೀಗಿರುವಾಗ, ದಾನದ ಮಾತೇನು?

ಮೋಹಾಚ್ಛಾಸ್ತ್ರನಿಷದ್ಧಂ ಯತ್ಕರ್ಮ ತತ್ಸತತಂ ಹರೇ ।
ಕರೋಮಿ ನಿಸ್ತ್ರಪಸ್ತತ್ತು ಬ್ರಹ್ಮನಿಷ್ಠ ಇತಿ ಬ್ರುವೇ ॥15॥

ಹರಿಯೇ, ನಾನು ಮೋಹದಿಂದ, ಶಾಸ್ತ್ರದಲ್ಲಿ ನಿಷೇಧಿಸಲ್ಪಟ್ಟ ಕೆಲಸಗಳನ್ನೇ ಯಾವಾಗಲೂ ಮಾಡುತ್ತಿದ್ದರೂ, ಸತ್ಪುರುಷರುಗಳ, ಎದಿರಿನಲ್ಲಿ ನಾನು ಬ್ರಹ್ಮಜ್ಞಾನಿಯೆಂದು ಹೇಳಿಕೊಳ್ಳುತ್ತಲಿದ್ದೇನೆ ನಿರ್ಲಜ್ಜನಲ್ಲವೇ ನಾನು?

ರೂಪವಾನಸ್ಮ್ಯಕುಲೀನೋಹಂ ವಿದ್ವಾನಿತಿ ಮತಿಭ್ರಮಾತ್ ।
ಮದಮತ್ತಮನಸ್ಕೋಹಂ ನ್ಯಕ್ಕರೋಮಿ ಗುರೂನಪಿ ॥16॥

ನಾನು ರೂಪವಂತನು, ಸತ್ಕುಲಪ್ರಸೂತನು, ವಿದ್ವಾಂಸನು, ಎಂದು, ಅಜ್ಞಾನದಿಂದ, ಮದಮತ್ತ ಮನಸ್ಸುಳ್ಳವನಾಗಿ ಗುರುಗಳನ್ನೂ ಕೂಡಾ, ತಿರಸ್ಕರಿಸುತ್ತಲಿರುವೆನು.

ಮಾತ್ಸರ್ಯೇಣ ಕೃಶಸ್ವಾಂತೋ ಭವದ್ದತ್ತಾಮಪಿ ಶ್ರಿಯಂ ।
ನೈವೇಹಾನುಭವಾಮ್ಯುಜ್ಝಿತ್ತೇ ಸಂತೋಷವರ್ಜಿತಃ ॥17॥

ಮಾತ್ಸರ್ಯದಿಂದ ಕ್ಷೀಣಮನಸ್ಸುಳ್ಳ ನಾನು, ನನ್ನ ಕರ್ಮಾನುಗುಣವಾಗಿ, ನಿನ್ನಿಂದ ಅನುಗ್ರಹಿಸಲ್ಪಟ್ಟ, ಅಲ್ಪಸ್ವಲ್ಪ ಸಂಪತ್ತನ್ನು ಕೂಡಾ, ಅಜ್ಞಾನದಿಂದ ಅನುಭವಿಸುತ್ತಿಲ್ಲ. ಇದಕ್ಕೆ, ಯಥಾ ಲಾಭ ಸಂತುಷ್ಟತೆ, ಇಲ್ಲದಿರುವುದೇ ಕಾರಣ.

ಸ್ವಾರ್ಥ ಸಾಧನ ನಿಷ್ಠೋಸ್ಮಿ ದಯಾ ದಾಕ್ಷಿಣ್ಯ ವರ್ಜಿತಃ ।
ಪಾಪೀಯಾಂಸಮಮುಂ ಶ್ರೀಶ ಕಥಂ ವೋದ್ಧರಸೇ ಪ್ರಭೋ ॥18॥

ಪ್ರಭುವೇ ಶ್ರಿಯಃ ಪತೇ, ನಾನು ದಯಾ ದಾಕ್ಷಿಣ್ಯರಹಿತನಾಗಿ, ಸ್ವಾರ್ಥವನ್ನು ನೆರವೇರಿಸಿಕೊಳ್ಳುವುದರಲ್ಲಿ ತತ್ಪರನಾಗಿರುವೆನು, ಈ ರೀತಿ ಪಾಪಿಯಾದ ನನ್ನನ್ನು ಹೇಗೆತಾನೇ ಉದ್ಧರಿಸುವೆಯೋ ನಾನರಿಯೇ?

ಆಶಾಪಾಶನಿಬದ್ಧಾತ್ಮಾ ವಿಷಯೇಷು ನಿಮಗ್ನಧೀಃ
ಇಂದ್ರಿಯಗ್ರಾಮನಿಘ್ನೋಹಂ ಕಥಂ ಸ್ಯಾಂತ್ವಯಿ ಭಕ್ತಿಭಾಕ್ ॥19॥

ಆಶೆಯೆಂಬ ಪಾಶದಿಂದ ಕಟ್ಟಲ್ಪಟ್ಟ ಮನಸ್ಸುಳ್ಳವನು ನಾನು, ಮತ್ತು ಸ್ಪರ್ಶಂದನಾದಿ ವಿಷಯಗಳಲ್ಲೇ ಮುಳುಗಿ ತೇಲುತ್ತಲಿದ್ದೇನೆ, ಇಂದ್ರಿಯಗಳಿಗೆ ವಶ್ಯನಾಗಿರುವೆನು. ಹೀಗಿರುವವನಿಗೆ, ನಿನ್ನ ವಿಷಯಕವಾದ ಭಕ್ತಿಯು ಹೇಗೆ ತಾನೇ ಉಂಟಾದೀತು?

ಮಾಯಾಜಾಲಂ ಪ್ರಸಾರ್ಯಾತ್ರ ವಿವಶೀಕುರುಷೇ ನರಾನ್ ।
ನ ತನ್ಮಾತ್ರ ದೋಷೋಸ್ತಿ ತ್ವದಧೀನಂ ಜಗತ್ತ್ರಯಂ ॥20॥

ಶ್ರಿಯಃಪತಿಯೇ, ಇಲ್ಲಿ ನಿನ್ನ ಮಾಯೆಯೆಂಬ ಬಲೆಯನ್ನು ಹರಡಿ, ಎಲ್ಲಾ ಚೇತನರನ್ನೂ ವಶಪಡಿಸಿಕೊಂಡಿರುತ್ತೀಯೆ. ಆದ್ದರಿಂದ, ನನ್ನದೇನೂ ತಪ್ಪಿಲ್ಲ, ನಿನ್ನ ಮಾಯೆಗೆ ನಾನೂ ಒಳಪಟ್ಟಿರುವನಲ್ಲವೇ? ಮೂರುಲೋಕವೂ ನಿನ್ನ, ಅಧೀನವಲ್ಲವೆ?

ಕಲೌಹಿ ಮಲಭೂಯಿಷ್ಠೇ ಜನಿಮಾನಸ್ಮಿ ಭೂತಲೇ ।
ವಿನಾ ತ್ವತ್ಕರುಣಾಂ ನಾಥ ನಾನ್ಯಾ ಗತಿರಿಹಾಸ್ತಿ ಮೇ ॥21॥

ಪಾಪ ಪ್ರಚುರವಾದ ಕಲಿಯುಗದಲ್ಲಿಈ ಭೂಮಿಯಲ್ಲಿ ಜನಿಸಿರುವೆನು, ಹೇ ಸ್ವಾಮಿಯೇ, ನಿನ್ನ ಕೃಪೆಯನ್ನು ಬಿಟ್ಟರೆ, ನನಗೆ ಬೇರೇ ಗತಿಯಿಲ್ಲ, ಅಂದರೆ, ಈ ಭೂಲೋಕದಲ್ಲಿ, ಪಾಪಮಯವಾದ ಕಲಿಯುಗದಲ್ಲಿ ಜನಿಸಿರುವೆನಾದ್ದರಿಂದ, ನಾನು ಬಹಳಪಾಪಿ ನೀನು ಕೃಪೆ ಮಾಡಿದ ಪಕ್ಷದಲ್ಲಿ ನಾನು ಉಜ್ಜೀವಿಸಬಹುದು, ನನಗೆ ಬೇರೆ ಗತಿಯಿಲ್ಲ

ಮಾಯೂರ ಬರ್ಹಮಕುಟಂ ಗುಂಜಾಮಂಜುಲ ಮಸ್ತಕಂ ।
ಕುಂತಲಾಲಿ ಲಸತ್ಫಾಲ ತಲವಿನ್ಯಸ್ತಚಿತ್ರಕಂ ॥22॥

ಭುಗ್ನಭ್ರೂಯುಗಲಂ ಸ್ಮಿತಪುಂಡರೀಕ ನಿಭೇಕ್ಷಣಂ ।
ಸ್ಫುರತ್ಕುಂಡಲ ಚಂಡಾಂಶು ಪರಿಮಂಡಿತಗಂಡಕಂ ॥23॥

ಮಂದಹಾಸ ವಿಲಾಸೇಷತ್ಸ್ಫುರನ್ಮಧುರಿಮಾಧರಂ ।
ಸ್ನಿಗ್ಧಮುಗ್ಧಮನೋಹಾರಿ ಚಿಬುಕಂ ಕಂಬುಕಂಧರಂ ॥24॥

ಶ್ರೀ ವತ್ಸತುಲಸೀಮಾಲ ಕೌಸ್ತುಭಾಂಚಿತಂ ವತ್ಸಕಂ ।
ಶುಂಡಾಡಂಬರಹಾರಿ ಶ್ರೀ ಭುಜದಂಡಚತುಷ್ಟಯಂ । ॥25॥

ಕಟಿಬದ್ಧಕನತ್ಕಾಂಚೀದಾಮಪೀತಾಂಬರಾಂಚಿತಂ ।
ಮಂಜುಶಿಂಜಾನ ಮಂಜೀರ ರಂಜಿತಾಂಘ್ರಿಸರೋರುಹಂ ॥26॥

ರಾಧಾಕರಾಂಬುಜ ನ್ಯಸ್ತ ಮುರಲೀವಾದನೋನ್ಮುಖಂ ।
ತ್ರಿಭಂಗಿ ಭಂಗುರಂ ಕೃಷ್ಣ ತವ ರೂಪಂ ಪ್ರದರ್ಶಯ ॥27॥

ಪೀತ್ವಾನೇತ್ರಪುಟಾಭ್ಯಾಂ ತಲ್ಲ ಭೇಯ ಕೃತ ಕೃತ್ಯತಾಂ ।
ಪಾಪೀಯಾನಯಮಿತ್ಯೇವಂ ಮಾಮುಂಚ ಮಧುಸೂದನ ॥28॥

ನವಿಲುಗರಿಯನ್ನು ಗುಲಗುಂಜಿ ಸರದಿಂದ ಕಟ್ಟಿರುವ ತಲೆಯ ಅಲಂಕಾರವುಳ್ಳ, ಜೋಲಾಡುವ ಮುಂಗುರುಳುಗಳಿಂದ ಮನೋಹರವಾದ ವಿಸ್ತಾರವಾದ ಹಣೆಯಲ್ಲಿ ಕಸ್ತೂರಿ ತಿಲಕವುಳ್ಳ, ಬಾಗಿದ ಹುಬ್ಬುಗಳುಳ್ಳ, ವಿಶಾಲವಾದ ಪುಂಡರೀಕದಂತೆ ಮನೋಹರವಾದ ಕಣ್ಣುಗಳುಳ್ಳ, ಸೂರ್ಯನಂತೆ ಪ್ರಕಾಶಿಸುವ ಮಕರಕುಂಡಲಗಳಿಂದ ಅಲಂಕೃತವಾದ ಕಪೋಲಗಳುಳ್ಳ, ಮಂದಹಾಸದಿಂದ ಸ್ಪೃಹಣೀಯವಾದ ಕೆಂದುಟಿಗಳುಳ್ಳ, ನುಣುಪಾಗಿಯೂ, ದರ್ಶನೀಯವಾಗಿಯೂ, ಇರುವ ಗಡ್ಡವುಳ್ಳ, ಶಂಖದಂತಿರುವ ಕತ್ತುಳ್ಳ, ಶ್ರೀ ವತ್ಸವೇನು, ತುಲಸೀಮಾಲೆಯೇನು, ಕೌಸ್ತುಭರತ್ನವೇನು, ಇವುಗಳಿಂದಲಂಕೃತವಾದ, ವಿಶಾಲವಕ್ಷಸ್ಥಲವುಳ್ಳ, ಗಜದ ಸೊಂಡಲಿನಂತೆ ದೀರ್ಘವಾಗಿಯೂ, ವರ್ತುಲವಾಗಿಯೂ ಇರುವ ನಾಲ್ಕು ತೋಳುಗಳುಳ್ಳ, ಕಟಿಯಲ್ಲಿ ಕಟ್ಟಲ್ಪಟ್ಟ ಕಾಂಚೀದಾಮವೇನು, ಪೀತಾಂಬರವೇನು, ಇವುಗಳುಳ್ಳ, ಕವಿಗಿಂಪಾಗಿ ದನಿಗೈಯುವ ಪಾದಾಭರಣಗಳಿಂದಲಂಕೃತವಾದ ಚರಣಾರವಿಂದಗಳುಳ್ಳ, ಮತ್ತು ರಾಧೆಯನ್ನು ತನ್ನ ಕೈಯಲ್ಲಿಪಿಡಿದಿರುವ, ಮುರಳಿಯನ್ನು ಬಾರಿಸುತ್ತಲಿರುವ ಬಾಯುಳ್ಳ, ಮೂರು ಭಂಗಿಯಿಂದ ನಿಂತಿರುವ ನಿನ್ನ ಆ ದಿವ್ಯರೂಪವನ್ನು,ಪಾಪಿಯಾದ ನನಗೆ ತೋರಿಸು ಕೃಷ್ಣ! ನನ್ನ ಎರಡು ಕಣ್ಣುಗಳೆಂಬ ಬೊಕ್ಕಸೆಯಿಂದ, ಅದನ್ನು ಪಾನಮಾಡುವೆನು. ಧನ್ಯನಾಗುವೆನು, ಇವನು ಪಾಪಿಯೆಂದು, ಕೈಬಿಡಬೇಡ ನೀನು, ಮಧುಸೂದನ ನಲ್ಲವೇ? ಮಧುವೆಂಬ

ಅಸುರನನ್ನು ನಾಶಮಾಡಿದಂತೆ, ಪಾಪಗಳನ್ನೂ ನಾಶಮಾಡು. ನಿನ್ನ ರೂಪವನ್ನು ದರ್ಶಿಸುವ ಭಾಗ್ಯವನ್ನು, ಅನುಗ್ರಹಿಸು.

ದುರ್ಲಭಂ ತಾವದತ್ರೈದೃಕ್ಪಾತ್ರಂ ನಾಥ ತವಾಧುನಾ।
ಅಯಾಚಿತಮಹೋ ಲಬ್ಧಂ ಮಾ ಜಹೀಹೀದಮಚ್ಯುತ ॥29॥

ಅಚ್ಯುತನೇ ನನ್ನಂಥ ಪಾಪಿಯು ನಿನಗೆ ದೊರಕುವುದು ದುರ್ಲಭ. ಅಯಾಚಿತವಾಗಿ ಈಗ ದೊರೆತಿರುವೆನು, ಇಂಥ ಪಾಪಿಯಾದ ನನ್ನನ್ನು ಕೈ ಬಿಡದೇ ಕಾಪಾಡು.

ಅನಾದಿವಾಸನಾಶ್ಲಿಷ್ಟಂ ಮಾನಸಂ ಮೇ ನಿರಂತರಂ।
ಪ್ರಾಕೃತಂ ವಸ್ತುಭೋಗ್ಯಂ ಸಜ್ಜಾನಾತಿ ನ ಪದಂ ತವ ॥30॥

ಅನಾದಿಯಾದ ವಾಸನೆಯಿಂದ ವ್ಯಾಪ್ತವಾದ ನನ್ನ ಮನಸ್ಸು, ಈ ಪ್ರಾಕೃತವಾದ ಹೇಯವಾದ ವಸ್ತುಗಳನ್ನೇ ಭೋಗ್ಯವೆಂದು ತಿಳಿದಿದೆ, ನಿನ್ನ ಪಾದಾರವಿಂದವನ್ನು ಭೋಗ್ಯವೆಂದರಿತಿಲ್ಲ.

ಅತೋಹಂ ಕರುಣಾಸಿಂಧೋ ಬಂಧೋ ತವ ಕೃಪಾಂ ಸದಾ।
ಯಾಚೇ ನೀಚೋಪ್ಯನಾಚಾರೋಪ್ಯಾಚಾರ್ಯವಚನೇರಿತಃ ॥31॥

ಆದ್ದರಿಂದಲೇ, ಎಲ್ಲೆ ಕರುಣಾಸಾಗರನೇ, ನಿರುಪಾಧಿಕ ಬಂಧುವೇ, ನಾನು ನೀಚನಾದರೂ, ಅಚಾರವಿಲ್ಲದವನಾದರೂ, ಜಗದಾಚಾರ್ಯನಾದ ರಾಮಾನುಜ ಯತೀಂದ್ರನ ಉಪದೇಶವಾಕ್ಯಿನಿಂದ ಪ್ರೇರಿಸಲ್ಪಟ್ಟವನಾಗಿ, ನಿರಂತರವೂ , ನಿನ್ನ ಕೃಪೆಯನ್ನು, ಯಾಚಿಸುವೆನು.

ಅಥವಾಸ್ಮದ್ಗುರು ಸ್ವಾಮೀ ರಾಮಾನುಜಯತೀಶ್ವರಃ।
ಪ್ರಪತ್ತಿಂ ಕೃತವಾನ್ಮಹ್ಯಂ ಮಹಾನುಗ್ರಹತಸ್ತ್ವಯಿ ॥32॥

ಅಥವಾ ನಾನೇಕೆ ನಿನ್ನಲ್ಲಿ ಬೇಡಿಕೊಳ್ಳಲಿ? ಜಗತ್ಸ್ವಾಮಿಯಾದ, ರಾಮಾನುಜಯತೀಶ್ವರನು, ಪರಮಾನುಗ್ರಹದಿಂದ, ನನಗೋಸ್ಕರ ನಿನ್ನಲ್ಲಿ ಪ್ರಪತ್ತಿಮಾಡಿರುವನಲ್ಲವೇ, ಅದೇ ನನ್ನನ್ನು ರಕ್ಷಿಸುವುದು.

ಅತೋಹಂ ನಿರ್ಭರೋಸ್ಮ್ಯತ್ರ ನಿರ್ಭೀತೋಸ್ಮಿ ಚ ನಿಸ್ಪೃಹಃ।
ನಿದ್ರಾಹಾರಭಯೈರ್ವ್ಯಾಪ್ತಃ ಪಶುಕಲ್ಪೋಲ್ಪ ಶೇಮುಷಿಃ ॥33॥

ಆದ್ದರಿಂದಲೇ, ಇಲ್ಲಿ ನಿರ್ಭರನಾಗಿರುವೆನು, ನಿರ್ಭಯನಾಗಿರುವೆನು ನಿರ್ಲಜ್ಜನಾಗಿರುವೆನು, ಪಶುವಿನಂತೆ ಅಲ್ಪಬುದ್ದಿಯುಳ್ಳವನಾಗಿ,

ನಿದ್ರಾಹಾರ ಗಳಿಸುವುದರಲ್ಲಿ ನಾನು ಆಸಕ್ತನಾಗಿರುವೆನು.

ನಿರ್ಭರತ್ವಾಚ್ಚ ನಿಶ್ಚಿಂತೋ ನಿರ್ಭಯತ್ವಾಚ್ಚ ನಿಸ್ಪೃಹಃ ।
ರಾಮಾನುಜಪದದ್ವಂದ್ವಂ ವ್ರಜಾಮಿ ಶರಣಂ ಸದಾ ॥34॥

ಮುಕುಂದನೇ, ನಿರ್ಭರನಾಗಿರುವುದರಿಂದಲೇ, ನಿಶ್ಚಿಂತನಾಗಿರುವೆನು. ನಿರ್ಭಯದಿಂದಲೇ, ನಿರ್ಲಜ್ಜನಾಗಿರುವೆನು. ಅದೂ ಅಲ್ಲದೇ, ಭಗವದ್ರಾಮಾನುಜರ ಪದದ್ವಂದ್ವವನ್ನು ರಕ್ಷಕವನ್ನಾಗಿ, ಅನವರತವೂ ನಂಬಿರುವೆನು,

ಪಾಹಿ ಮಾಂ ಕರುಣಾಸಿಂಧೋ ದೇವ ದೇವ ಶ್ರಿಯಃಪತೇ ।
ಸರ್ವದಾ ತ್ವತ್ಪದಾಂಭೋಜ ಕೈಂಕರ್ಯೇಚ ನಿಯುಂಕ್ಷ್ವಮಾಂ ॥35॥

ದೇವತೆಗಳಿಗೆಲ್ಲಾ ದೇವನೇ, ಶ್ರಿಯಃಪತಿಯೇ, ದಯಾನಿಧಿಯೇ, ನನ್ನನ್ನು ರಕ್ಷಿಸು. ಅನವರತವೂ ನಿನ್ನ ಪಾದಾರವಿಂದ ಕೈಂಕರ್ಯದಲ್ಲಿ ನನ್ನನ್ನು ಸೇರಿಸಿಕೊಂಡು ಅನುಗ್ರಹಿಸು.

ಧತ್ತೇ ಪ್ರಪನ್ನವಾಣೀಂ ಯಃ ಕಂಠೇ ನಿತ್ಯಂ ಸ ಭಕ್ತಿಭಾಕ್ ।
ನಾರಾಯಣ ಕೃಪಾ ಪಾತ್ರಂ ಭವತೀಹ ನ ಸಂಶಯಃ ॥36॥

ಯಾವನು, ಈ 'ಪ್ರಪನ್ನವಾಣೀ' ಎಂಬ ಸ್ತೋತ್ರವನ್ನು ಕಂಠದಲ್ಲಿ ಧರಿಸುವನೋ, ಅವನು, ಭಗವಂತನಲ್ಲಿ ಭಕ್ತಿಯನ್ನು ಹೊಂದಿ, ನಾರಾಯಣನ ಕೃಪೆಗೆ ಪಾತ್ರನಾಗುವನು, ಇದಕ್ಕೆ ಸಂದೇಹವಿಲ್ಲ.

ಪ್ರಪನ್ನವಾಣೀಮಿತ್ಯೇನಾಂ ದೃಢಭಕ್ತ್ಯಾರ್ಪಯದ್ವಿಭೋಃ ।
ನಾರಾಯಣಸ್ಯ ಪಾದಾಬ್ಜೇ ಜಗ್ಗೂವಕುಲ ಭೂಷಣಃ ॥37॥

ಜಗ್ಗೂವಕುಲಭೂಷಣದಾಸನು, ಭಕ್ತಿಪುರಸ್ಸರವಾಗಿ, ಈ ಪ್ರಪನ್ನ ವಾಣಿಯೆಂಬ ಸ್ತೋತ್ರವನ್ನು, ನಾರಾಯಣನ ಪಾದಾರವಿಂದಗಳಿಗೆ ಸಮರ್ಪಿಸಿ ಧನ್ಯನಾದನು.

ಇತಿ ಶ್ರೀ ಯದುಶೈಲವಾಸಿ ಬಾಲಧನ್ವಿ
ಜಗ್ಗೂವಕುಲ ಭೂಷಣ
ವಿರಚಿತಾ
ಪ್ರಪನ್ನವಾಣೀ
ಸಂಪೂರ್ಣಾ

ಶ್ರೀಃ

ಪೂಜ್ಯ ಮಾತಾಪಿತೃಗಳು
ಶ್ರೀ ಜಗ್ಗೂವಹಳಭೂಷಣರು ಮತ್ತು ಶ್ರೀಮತಿ ಎಗ್ಗಮ್ಮನವರು

॥ಶ್ರೀ॥

ಜಗ್ಗೂವಕುಲ ಭೂಷಣ ಕವಿ ವಿರಚಿತವಾದ ಗ್ರಂಥಗಳು

ಗದ್ಯಕಾವ್ಯ

1) ಜಯಂತಿಕಾ (ಇದು ಮಹಾಕವಿ ಬಾಣ ಭಟ್ಟನ ಕಾದಂಬರಿಯಂತಿದೆ)
2) ಯದುವಂಶಚರಿತಂ
3) ಉಪಾಖ್ಯಾನರತ್ನ ಮಂಜೂಷಾ
4) ಭಾವ ಕೌಮುದೀ

ಪದ್ಯಕಾವ್ಯ

5) ಅದ್ಭುತದೂತ ಮಹಾಕಾವ್ಯ
6) ಕರುಣರಸ ತರಂಗಿಣೀ
7) ಪಥಿಕೋಕ್ತಿಮಾಲಾ,
8) ಶೃಂಗಾರಲೀಲಾಮೃತಂ

ಚಂಪೂ ಕಾವ್ಯ

9) ಯತಿರಾಜ ಚಂಪು
10) ಭಾರತ ಸಂಗ್ರಹ

ನಾಟಕಗಳು

11) ಅದ್ಭುತಾಂಶುಕಂ
12) ಸ್ಯಮಂತಕಂ
13) ಪ್ರತಿಜ್ಞಾಕೌಟಲ್ಯಂ (ಮುದ್ರಾರಾಕ್ಷಸ ಪೂರ್ವಭಾಗ)
14) ಮಂಜುಲ ಮಂಜೀರಂ
15) ಬಲಿ ವಿಜಯ
16) ಅಮೂಲ್ಯ ಮಾಲ್ಯಂ
17) ಅಪ್ರತಿಮ ಪ್ರತಿಮಂ
18) ಮಣಿಹರಣಂ
19) ಯೌವರಾಜ್ಯಂ
20) ಪ್ರಸನ್ನ ಕಾಶ್ಯಪಂ
21) ಸಂಯುಕ್ತಾ
22) ವೀರಸೌಭದ್ರಂ
23) ಪ್ರತಿಜ್ಞಾಶಾಂತನವಂ
24) ನವಜೀಮೂತಂ
25) ಅನಂಗದಾಪ್ರಹಸನಂ
26) ವ್ರತಫಲಂ

ಸ್ತೋತ್ರಗಳು

27) ಹಯವದನ ಸ್ತೋತ್ರಂ
28) ಅಮೃತಾಧಿರೋಹಿಣೀ
29) ಲಕ್ಷ್ಮೀದಂಡಕಂ
30) ಲಕ್ಷ್ಮೀಸ್ತುತಿ ಮಂಜರೀ
31) ಯದುಶೈಲೇಶ ಶತಕಂ
32) ದಾಶರಥಿ ಸುಪ್ರಭಾತಂ
33) ವಾಸುದೇವ ಸುಪ್ರಭಾತಂ
34) ಭಾರ್ಗವೀ ಸುಪ್ರಭಾತಂ
35) ಶ್ರೀ ನೃಸಿಹ್ಮ ಸುಪ್ರಭಾತಂ
36) ಪ್ರಪನ್ನವಾಣೀ